# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶನಿವಾರ, ಜುಲೈ 20, 2024

ಸಂಪುಟ : 51 ಸಂಚಿಕೆ : 67 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




ಚಿತ್ರ: ರಫೀಕ್, ಜನತಾವಾಣಿ

**ಮೈದುಂಬಿದ ತುಂಗಭದ್ರೆ** ಮಲೆನಾಡಿನಲ್ಲಿ ಕಳೆದೊಂದು ವಾರದಿಂದ ಉತ್ತಮ ಮಳೆಯಾಗುತ್ತಿರುವ ಕಾರಣ ಹರಿಹರದ ತುಂಗಭದ್ರಾ ನದಿ ಮೈದುಂಬಿ ಹರಿಯುತ್ತಿದೆ. ಜಿಟಿ ಜಿಟಿ ಮಳೆಯ ನಡುವೆಯೇ ಜನರು ನದಿ ವೀಕ್ಷಣೆಗೆ ಆಗಮಿಸುತ್ತಿದ್ದಾರೆ. ಫೋಟೋ ತೆಗೆದು ಸಂಭ್ರಮಿಸುತ್ತಿದ್ದಾರೆ.

# ಮಳೆ: ಜಿಲ್ಲೆಯಲ್ಲಿ ವಿಪತ್ತು ನಿರ್ವಹಣಾ ತಂಡ ಸನ್ನದ್ಧ

## ಕಂದಾಯ ಸಚಿವರ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ

ದಾವಣಗೆರೆ, ಜೂ. 19- ಜಿಲ್ಲೆಯಲ್ಲಿ ತುಂಗಭದ್ರಾ ನದಿ ಅಪಾಯದ ಮಟ್ಟದಲ್ಲಿ ಸದ್ಯಕ್ಕೆ ಹರಿಯುತ್ತಿಲ್ಲ. ಈಗಾಗಲೇ ಎಲ್ಲಾ ಗ್ರಾಮ ಪಂಚಾಯಿತಿವಾರು ಟಾಸ್ಕ್ ಫೋರ್ಸ್ ಸಮಿತಿ ಸಕ್ರಿಯಗೊಳಿಸಿದ್ದು, ನದಿಯಲ್ಲಿ ಹರಿಯುತ್ತಿರುವ ನೀರಿನ ಮಾಹಿತಿಯನ್ನು ಸಾರ್ವಜನಿಕರಿಗೆ ತಲುಪಿಸುವ ಕೆಲಸ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಹೇಳಿದ್ದಾರೆ.

ಅವರು ಶುಕ್ರವಾರ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು ಮಲೆನಾಡು, ಕರಾವಳಿ, ಪಶ್ಚಿಮಘಟ್ಟಗಳಲ್ಲಿ ಸುರಿಯುತ್ತಿರುವ ಮಳೆಯಿಂದ ಬಾಧಿತವಾದ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಪಾಲ್ಗೊಂಡು ಜಿಲ್ಲೆಯಲ್ಲಿನ ಮಳೆಯ ಕುರಿತು ಮಾಹಿತಿ ನೀಡಿದರು.



ನದಿಗೆ ಲಕ್ಷಕ್ಕಿಂತ ಅಧಿಕ ಕ್ಯೂಸೆಕ್ಸ್ ನೀರು ಬಂದಾಗ ಕೆಲವು ಕಡೆ ಮಾತ್ರ ಸಮಸ್ಯೆಯಾಗಲಿದೆ. ಅಂತಹ ಕಡೆ 44 ಕುಟುಂಬಗಳನ್ನು ಗುರುತಿಸಲಾಗಿದೆ ಮತ್ತು ವಿಪತ್ತು ನಿರ್ವಹಣಾ ತಂಡವನ್ನೂ ಸಹ ಸನ್ನದ್ದವಾಗಿಡಲಾಗಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು, ದಾವಣಗೆರೆ ಜಿಲ್ಲೆಯಲ್ಲಿ ತುಂಗಭದ್ರಾ ನದಿ ಇದ್ದು ಮಲೆನಾಡಿನಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ ತುಂಗಾ ಜಲಾಶಯ ಮತ್ತು ಭದ್ರಾ ಜಲಾಶಯದಿಂದ ನೀರು ಬಿಟ್ಟಾಗ ಹೊನ್ನಾಳಿ, ಹರಿಹರದ ಕೆಲವು ಭಾಗಗಳಲ್ಲಿ ಪ್ರವಾಹ ಉಂಟಾಗಬಹುದು.

**ಮುಂದಿನ ಮೂರ್ನಾಲ್ಕು ದಿನ ಕಟ್ಟೆಚ್ಚರ ವಹಿಸಿ, ಪ್ರಕೃತಿ ವಿಕೋಪದಿಂದಾಗುವ ಅನಾಹುತ ತಡೆಯಲು ತಕ್ಷಣ ಕ್ರಮವಹಿಸಲು ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣಭೈರೇಗೌಡ ಸೂಚನೆ**

ಪ್ರಸ್ತುತ ತುಂಗಾ ನದಿಯಿಂದ ಮಾತ್ರ 80 ಸಾವಿರ ಕ್ಯೂಸೆಕ್ಸ್ ನೀರು ಹರಿಯುತ್ತಿದ್ದು, ತುಂಗಭದ್ರಾ ಜಲಾಶಯಕ್ಕೆ 1 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ. ಈ (4ನೇ ಪುಟಕ್ಕೆ)

# ಬಿಜೆಪಿ ಹಗರಣಗಳ ತನಿಖೆ

## ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರಗಳ ಎಲ್ಲಾ ಹಗರಣಗಳ ತನಿಖೆ ನಡೆಸುವುದಾಗಿ ಘೋಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಜು. 19 - ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಆಡಳಿತದ ಸಂದರ್ಭದಲ್ಲಿ ನಡೆದಿರುವ ಎಲ್ಲಾ ಹಗರಣಗಳನ್ನು ತನಿಖೆಗೆ ಒಪ್ಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಪ್ರಕಟಿಸಿದ್ದಾರೆ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ ಹಗರಣ ಕುರಿತು ಮುಂದುವರೆದು ಉತ್ತರ ನೀಡಿದ ಮುಖ್ಯಮಂತ್ರಿ ಅವರು, ಬಿಜೆಪಿ ಆಡಳಿತದಲ್ಲಿ ನಡೆದಿದೆ ಎನ್ನಲಾದ ಹಗರಣಗಳ ಪಟ್ಟಿಯನ್ನೇ ಸದನದ ಮುಂದಿಟ್ಟು ಇದರಲ್ಲಿ ಯಡಿಯೂರಪ್ಪ, ಬೊಮ್ಮಾಯಿ ಅಷ್ಟೇ ಅಲ್ಲದೆ, ಹಲವು ಸಚಿವರುಗಳು ಭಾಗಿಯಾಗಿದ್ದಾರೆ ಎಂದರು.

ಇವರಿಬ್ಬರ ಆಡಳಿತದಲ್ಲಿ ಅಸಂಖ್ಯಾತ ಹಗರಣಗಳು ನಡೆದಿವೆ, ಅದರಲ್ಲಿ ಕೆಲವನ್ನು ಮಾತ್ರ ನಾನು ಇಲ್ಲಿ ಹೇಳಬಯಸುತ್ತೇನೆ ಮತ್ತು ತನಿಖೆಗೂ ಒಪ್ಪಿಸುತ್ತೇನೆ ಎಂದು ಪಟ್ಟಿಯನ್ನೇ ಸದನದ ಮುಂದಿಟ್ಟರು.

ಯಡಿಯೂರಪ್ಪ ಆಪ್ತ ಉಮೇಶ್ ಹಾಗೂ ಇತರರ ಮನೆಯಲ್ಲಿ 750 ಕೋಟಿ ರೂ.ಗೂ ಹೆಚ್ಚು ಹಣ ದೊರೆತಿದೆ. ಅಲ್ಲದೆ, ಯಡಿಯೂರಪ್ಪ ಮತ್ತು ವಿಜಯೇಂದ್ರ ಕುಟುಂಬದ ಆದಾಯ ಮೀರಿದ ಆಸ್ತಿ ನೂರಾರು ಕೋಟಿ ರೂ ದೊರೆತಿದೆ ಎಂದು ಆರೋಪಿಸಿದರು.




**ಯಡಿಯೂರಪ್ಪ, ಬೊಮ್ಮಾಯಿ ಆಡಳಿತವಿದ್ದಾಗ ಎಪಿಎಂಸಿಯಲ್ಲಿ 47.16 ಕೋಟಿ ರೂ., ಭೋವಿ ಅಭಿವೃದ್ಧಿ ನಿಗಮದಲ್ಲಿ 87 ಕೋಟಿ ರೂ.ಗೂ ಹೆಚ್ಚು, ದೇವರಾಜ ಅರಸು ಟ್ರಕ್ ಟರ್ಮಿನಲ್ 50 ಕೋಟಿ ರೂ.ಗೂ ಹೆಚ್ಚು, ಗಂಗಾಕಲ್ಯಾಣ ಯೋಜನೆಯಡಿ 430 ಕೋಟಿ ರೂ., ಪ್ರವಾಸೋದ್ಯಮ ಇಲಾಖೆಯಲ್ಲಿ 247 ಕೋಟಿ ರೂ., ಕಿಯೋನಿಕ್ಸ್ ಹಗರಣದಲ್ಲಿ 500 ಕೋಟಿ ರೂ., ಕೋವಿಡ್ ಹಗರಣ ನಡೆದಿದೆ. ಪಿಎಸ್ಐ ಮತ್ತು ಇತರೆ ನೇಮಕಾತಿ, ಪರಶುರಾಮ್ ಥೀಮ್ ಪಾರ್ಕ್, ಬಿಟ್ ಕಾಯಿನ್ ಹಗರಣಗಳ ಬಗ್ಗೆಯೂ ತನಿಖೆ ನಡೆಸಲಾಗುವುದು ಎಂದ ಸಿದ್ದರಾಮಯ್ಯ.**

ಕೆಕೆಆರ್‌ಡಿಬಿ, ಕಂದಾಯ, ಕೃಷಿ, ಅಂಗನವಾಡಿ, ಗಣಿ, ಬಿಡಿಎ ಮತ್ತು ಕೆಐಎಡಿಬಿ ಡಿ-ನೋಟಿಫಿಕೇಷನ್ ಹಗರಣಗಳು ಇವರ ಆಡಳಿತದಲ್ಲೇ (4ನೇ ಪುಟಕ್ಕೆ)

# ಬಿಜೆಪಿಗರು ಭ್ರಷ್ಟಾಚಾರದ ಪಿತಾಮಹರು

ಬೆಂಗಳೂರು, ಜು. 19 - ಬಿಜೆಪಿಗರು ಭ್ರಷ್ಟಾಚಾರದ ಪಿತಾಮಹರು. ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಆಡಳಿತದಲ್ಲಿ ಹಲವಾರು ನಿಗಮಗಳ ಸುಮಾರು 300 ಕೋಟಿ ರೂ.ಗಳಿಗೂ ಹೆಚ್ಚು ಅಕ್ರಮ ನಡೆದಿದ್ದು, ಸದನದ ಮೂಲಕ ಜನರಿಗೆ ತಿಳಿಸುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಭೋವಿ ನಿಗಮದ 87 ಕೋಟಿ ರೂ., ಎಪಿಎಂಸಿಯ 47 ಕೋಟಿ ರೂ., 2019ರಲ್ಲಿ ಅಂಗವಿಕಲ ಕಲ್ಯಾಣ ಇಲಾಖೆಯ 22 ಕೋಟಿ ರೂ., ಅಂಬೇಡ್ಕರ್ ನಿಗಮದ ಕೆನರಾ ಬ್ಯಾಂಕ್‌ನಲ್ಲಿನ ಹಣ ಜೂನ್ 2018ರಲ್ಲಿ 5 ಕೋಟಿ ರೂ., ದೇವರಾಜ್ ಅರಸು ನಿಗಮದ 47 ಕೋಟಿ ರೂ., ಮಾಲಿನ್ಯ ನಿಯಂತ್ರಣ ಮಂಡಲಿಯ 10 ಕೋಟಿ ರೂ., ಕೆಐಡಿಬಿಯ ಹಣ ಸೇಲಂಗೆ ಅಕ್ರಮವಾಗಿ ವರ್ಗಾವಣೆಯಾಗಿದೆ ಎಂದು ಆರೋಪಿಸಿದರು.

ಬಿಜೆಪಿಯ ಅಕ್ರಮಗಳ ಕುರಿತು ಖಂಡಿತಾ ತನಿಖೆ ನಡೆಸಲಾಗುವುದು. ಸದನದಲ್ಲಿ ಎಲ್ಲಾ (2ನೇ ಪುಟಕ್ಕೆ)

# ಹೋರಾಟಗಾರರ ಮೇಲೆ ಗುಂಡು

## ಇಂಟರ್‌ನೆಟ್ ಸೇವೆ ಬಂದ್

**ಬಾಂಗ್ಲಾ : ಮೀಸಲಾತಿ ಪ್ರತಿಭಟನೆ**

ಢಾಕಾ, ಜು. 19 - ಬಾಂಗ್ಲಾದೇಶದಲ್ಲಿ ಮೀಸಲಾತಿ ವಿರುದ್ಧ ಹಿಂಸಾತ್ಮಕ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಭದ್ರತಾ ಸಿಬ್ಬಂದಿ ಗುಂಡು ಹಾಗೂ ಅಶ್ರುವಾಯು ಸಿಡಿಸಿದ್ದಾರೆ. ಢಾಕಾದಲ್ಲಿ ಮೊಬೈಲ್ ಹಾಗೂ ಇಂಟರ್ ನೆಟ್ ಸೇವೆ ನಿರ್ಬಂಧಿಸಲಾಗಿದೆ. ಎಲ್ಲಾ ರೀತಿಯ ಸಮಾವೇಶಗಳನ್ನು ನಿಷೇಧಿಸಲಾಗಿದೆ.

ವಾರಗಳ ಹಿಂದೆ ಪ್ರತಿಭಟನೆಗಳು ಆರಂಭವಾಗಿದ್ದವು. ಆದರೆ ನಂತರದಲ್ಲಿ ಪ್ರತಿಭಟನೆಗಳು ಹಿಂಸಾ ಸ್ವರೂಪ ತಳೆದಿವೆ. ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ ಸ್ಪಷ್ಟವಾಗಿಲ್ಲ. ಬಾಂಗ್ಲಾದ ಕೆಲ (2ನೇ ಪುಟಕ್ಕೆ)

# ರಾಜ್ಯದಲ್ಲಿ ವಾಡಿಕೆಗಿಂತ ಶೇ.22ರಷ್ಟು ಹೆಚ್ಚು ಮಳೆ

ಬೆಂಗಳೂರು, ಜು. 19 - ಜೂನ್ ನಂತರದಲ್ಲಿ ಮುಂಗಾರು ಮಳೆಯ ಪ್ರಮಾಣ ವಾಡಿಕೆಗಿಂತ ಶೇ. 22ರಷ್ಟು ಹೆಚ್ಚಾಗಿದೆ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ಜೂನ್ 1 ರಿಂದ ಇಲ್ಲಿಯವರೆಗೆ ಸಾಮಾನ್ಯ ಮಳೆಯ ಪ್ರಮಾಣ 365 ಮಿಮೀ ಆಗಿದೆ. ಆದರೆ, ವಾಸ್ತವಿಕವಾಗಿ 447 ಮಿಮೀ ಮಳೆಯಾಗಿದೆ. ಇದು ವಾಡಿಕೆಗಿಂತ ಶೇ.22ರಷ್ಟು ಹೆಚ್ಚು ಎಂದು ಹೇಳಿದರು.

ಮಳೆಯಿಂದಾಗಿ 371 ಹೆಕ್ಟೇರ್ ಕೃಷಿ ಬೆಳೆ ಹಾಗೂ 351 ಹೆಕ್ಟೇರ್ ತೋಟಗಾರಿಕಾ ಬೆಳೆಗೆ (4ನೇ ಪುಟಕ್ಕೆ)

# ಚೆಕ್ ಬೌನ್ಸ್ ಪ್ರಕರಣಗಳ ಬಾಕಿಗೆ ಸುಪ್ರೀಂ ಕಳವಳ

ನವದೆಹಲಿ, ಜು. 19 - ಚೆಕ್ ಬೌನ್ಸ್ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ಬಾಕಿ ಉಳಿದಿರುವ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಸಂಬಂಧಿಸಿದ ಕಕ್ಷಿದಾರರು ಸಂಧಾನಕ್ಕೆ ಬಯಸಿದಲ್ಲಿ ಅದಕ್ಕೆ ಉತ್ತೇಜನ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯ ಹಾಗೂ ಅಹಸಾನುದ್ದೀನ್ ಅಮಾನುಲ್ಲಾ ಅವರನ್ನು ಒಳಗೊಂಡ ಪೀಠ, ಚೆಕ್ ಬೌನ್ಸ್ ಪ್ರಕರಣದ ವಿಚಾರಣೆ ನಡೆಸುವಾಗ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಕೋರ್ಟ್‌ಗಳ ಎದುರು ಹೆಚ್ಚಿನ ಸಂಖ್ಯೆಯ ಚೆಕ್‌ಬೌನ್ಸ್ ಪ್ರಕರಣಗಳು ಬಾಕಿ ಉಳಿದಿವೆ. ಈ ಬಗ್ಗೆ ನಮ್ಮ ನ್ಯಾಯಾಂಗ ವ್ಯವಸ್ಥೆಗೆ ಗಂಭೀರ ಕಳವಳವಿದೆ. ಈ ಪ್ರಕರಣಗಳಲ್ಲಿ ಶಿಕ್ಷೆಗಿಂತ ಪರಿಹಾರಕ್ಕೆ ಆದ್ಯತೆ ನೀಡಬೇಕಿದೆ ಎಂದು ನ್ಯಾಯಾಲಯ ತಿಳಿಸಿದೆ.

# ಪ್ರಭಾ ಆಯ್ಕೆ ಅಸಿಂಧು ಎಂದು ಕೋರಿ ಗಾಯತ್ರಿ ತಕರಾರು ಅರ್ಜಿ

ಬೆಂಗಳೂರು, ಜು.19- ಈಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಆಯ್ಕೆಯನ್ನು ಅಸಿಂಧು ಎಂದು ಘೋಷಿಸುವಂತೆ ಕೋರಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಜಿ.ಎಸ್. ಗಾಯತ್ರಿ ಸಿದ್ದೇಶ್ವರ ಅವರು ಹೈಕೋರ್ಟ್‌ನಲ್ಲಿ ಚುನಾವಣಾ ತಕರಾರು ಅರ್ಜಿ ದಾಖಲಿಸಿದ್ದಾರೆ.

‘ಪ್ರಭಾ ಅವರು, ಮತದಾರರಿಗೆ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಿಸುವ ಮೂಲಕ ಮಹಿಳೆಯರಿಗೆ ವರ್ಷಕ್ಕೆ 1 ಲಕ್ಷ ಕೊಡುವ ಭರವಸೆ ನೀಡಿದ್ದಾರೆ. ಇದು ಪ್ರಜಾ ಪ್ರತಿನಿಧಿ ಕಾಯ್ದೆ–1951ರ ಕಲಂ 123(1), 123(2), 123(4) ಮತ್ತು 123(6)ಕ್ಕೆ ವಿರುದ್ಧವಾಗಿದೆ. ಮತದಾರರಿಗೆ ಲಂಚದ ಆಮಿಷ ಒಡ್ಡಿರುವ ಮತ್ತು ಚುನಾವಣಾ ಅಕ್ರಮಗಳನ್ನು ನಡೆಸಿರುವ ಇವರ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಬೇಕು’ ಎಂದು ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.





ಹಾಸನದ ಶ್ರೇಯಸ್ ಪಟೇಲ್ ಆಯ್ಕೆ ಅಸಿಂಧು ಕೋರಿ ಹೈಕೋರ್ಟ್ ವಕೀಲ ಜಿ.ದೇವರಾಜೇಗೌಡ ಪುತ್ರ ಡಿ.ಚರಣ್ ಗೌಡ ಸಹ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯಲ್ಲಿ, ‘ಶ್ರೇಯಸ್ ಪಟೇಲ್ ಚುನಾವಣೆ ವೇಳೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಮ್ಮ ಆಸ್ತಿ ವಿವರಗಳನ್ನು ಪ್ರಾಮಾಣಿಕವಾಗಿ ನಮೂದಿಸಿಲ್ಲ. ಐದು ವರ್ಷಗಳ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿಲ್ಲ. ಅವರ ನಾಮಪತ್ರ (4ನೇ ಪುಟಕ್ಕೆ)

# ಅಕ್ರಮ ಆಸ್ತಿ ಗಳಿಕೆ : ರಾಜ್ಯದ ಸರ್ಕಾರಿ ಅಧಿಕಾರಿಗಳ ಮೇಲೆ ‘ಲೋಕಾ’ ದಾಳಿ


ಬೆಂಗಳೂರು, ಜು. 19 - ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಲೋಕಾಯುಕ್ತರು ಶುಕ್ರವಾರ ರಾಜ್ಯದ ಐದು ಜಿಲ್ಲೆಗಳ 12ಸರ್ಕಾರಿ ಅಧಿಕಾರಿಗಳಿಗೆ ಸೇರಿದ ಹಲವು ಕಡೆಗಳಲ್ಲಿ ದಾಳಿ ನಡೆಸಿದ್ದಾರೆ. ಶೋಧ ಕಾರ್ಯಾಚರಣೆ ವೇಳೆ 50 ಕೋಟಿ ರೂ. ಮೊತ್ತದ ಅಕ್ರಮ ಸಂಪತ್ತನ್ನು ಪತ್ತೆ ಮಾಡಿದ್ದಾರೆ.

ಕಾನೂನು ಮಾಪನಶಾಸ್ತ್ರದ ಉಪ ನಿಯಂತ್ರಕ ಅಥರ್ ಅಲಿ ದಾಳಿಗೊಳಗಾದವರಲ್ಲಿ ಅತಿ ಹೆಚ್ಚು 8.63 ಕೋಟಿ ರೂಪಾಯಿ ಅಕ್ರಮ ಆಸ್ತಿ ಸಂಪಾದಿಸಿದ್ದಾರೆ ಎಂದು ಲೋಕಾಯುಕ್ತರು ತಿಳಿಸಿದ್ದಾರೆ.

ಮಂಗಳೂರು ನಗರ ಪಾಲಿಕೆ ಆಯುಕ್ತ ಸಿ.ಎಲ್. ಆನಂದ್ ಅವರು 2.78 ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿದ್ದಾರೆ. ಇನ್ವೆಸ್ಟ್ ಕರ್ನಾಟಕ ಫೋರಂನಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ನಿಯೋಜನೆಗೊಂಡಿರುವ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಹೆಚ್ಚುವರಿ ನಿರ್ದೇಶಕ ಸಿ.ಟಿ. ಮುದ್ದುಕುಮಾರ್ ಅವರ ಬಳಿ 7.41 ಕೋಟಿ ರೂ. ಮೌಲ್ಯದ ಅಕ್ರಮ ಆಸ್ತಿ ಪತ್ತೆಯಾಗಿದೆ.

ಬೆಂಗಳೂರು, ತುಮಕೂರು, ಶಿವಮೊಗ್ಗ, ಯಾದಗಿರಿ ಮತ್ತು ಕಲಬುರ್ಗಿಯಲ್ಲಿ ದಾಳಿ ನಡೆಸಲಾಗಿದೆ. 100 ಕ್ಕೂ ಹೆಚ್ಚು ಅಧಿಕಾರಿಗಳನ್ನೊಳಗೊಂಡ ತಂಡ 54 ಸ್ಥಳಗಳಲ್ಲಿ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಉದ್ಯಮಗಳು ಬ್ಯಾಂಕ್ ವಲಯ ಪ್ರವೇಶಿಸಲು ಅವಕಾಶವಿಲ್ಲ



ಮುಂಬೈ, ಜು.19 - ಉದ್ಯಮ ಸಂಸ್ಥೆಗಳು ಬ್ಯಾಂಕಿನ ಪ್ರವರ್ತಕ ರಾಗಲು ಅವಕಾಶ ನೀಡುವ ಯಾವುದೇ ಯೋಜನೆ ಸದ್ಯಕ್ಕೆ ಇಲ್ಲ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತದಾಸ್ ಹೇಳಿದ್ದಾರೆ. ಕಾರ್ಪೊರೇಟ್ ಸಂಸ್ಥೆಗಳು ಬ್ಯಾಂಕ್ ಪ್ರವರ್ತಕರಾಗಲು ಅವಕಾಶ ನೀಡಿದರೆ ಹಿತಗಳ ಸಂಘರ್ಷವಾಗುತ್ತದೆ ಎಂದವರು ಹೇಳಿದ್ದಾರೆ.


SITE FOR SALE
SIDDAGANGA LAYOUT, AVARAGERE NEW RING ROAD
20X30, 30X40
CONTACT :
86609 98651
70265 08405





# ಮೈದುಂಬಿದ ಮದಗದ ಕೆರೆ ಕುಣಿದು ಕುಪ್ಪಳಿಸುತ್ತಿರುವ ಕುಮದ್ವತಿ..!



ರಾಣೇಬೆನ್ನೂರು, ಜು.19- ಕಳೆದೆರಡು ದಿನಗಳಿಂದ ಶಿವಮೊಗ್ಗ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಶಿಕಾರಿಪುರ ತಾಲ್ಲೂಕಿನ ಅಂಜನಾಪುರ ಜಲಾಶಯ ತುಂಬಿ ತುಳುಕಾಡುತ್ತಿದೆ. ಹಾಗಾಗಿ ಕೆರೆಗೆ ಹಾರವಾದ ನೆರೆಯ ರಟ್ಟಿಹಳ್ಳಿ ತಾಲ್ಲೂಕಿನ ಐತಿಹಾಸಿಕ ಮದಗದ ಕೆಂಚಮ್ಮನ ಕೆರೆ ಮೈದುಂಬಿಕೊಂಡಿದೆ. ಕೋಡಿ ಮೂಲಕ ಕುಣಿದು ಕುಪ್ಪಳಿಸುತ್ತಾ ಬಂದ ಕುಮದ್ವತಿ ತನ್ನ ನೆಚ್ಚಿದ ಜನರ ಮನದುಂಬಿಸಿದ್ದಾಳೆ.

ರಟ್ಟಿಹಳ್ಳಿ ತಾಲ್ಲೂಕಿನ ಕೋಡಮಗ್ಗಿ, ತಿಪ್ಪಾಯಿ ಕೊಪ್ಪ, ಮಾಸೂರು, ಚಿಕ್ಕಮೊರಬ, ಹಿರೇಮೊರಬ, ರಟ್ಟಿಹಳ್ಳಿ, ತೋಟಗಂಟಿ ಹಾಗೂ ರಾಣೇಬೆನ್ನೂರು ತಾಲ್ಲೂಕಿನ ಚಿಕ್ಕಮಾಗನೂರು, ಹಿರೇಮಾಗನೂರು, ಕುಪ್ಪೇಲೂರು, ನಂದಿಹಳ್ಳಿ, ಲಿಂಗದಹಳ್ಳಿ ಸೇರಿದಂತೆ 28 ಗ್ರಾಮಗಳ ಜನರ ಬರಡಾಗಬಹುದಿದ್ದ ಬದುಕು ಚಿಗುರೊಡೆದಿದೆ. ಕಳೆಗುಂದಿದ್ದ ಮುಖಗಳೀಗ ಕಳೆಗಟ್ಟಿವೆ. 'ಮಾಯದಂತ ಮಳೆ ಬಂತಣ್ಣಾ, ಮದಗಾದ ಕೆರೆಗೆ' ಎನ್ನುವ ಹಾಡೀಗ ಗುನುಗುಡುತ್ತಿದೆ.

## ನಗರದ ದತ್ತಾತ್ರೇಯ ದೇವಾಲಯದಲ್ಲಿ ನಾಳೆ ವಿಶೇಷ ಪೂಜೆ



ದಾವಣಗೆರೆ, ಜು.19 ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಿವಾನಂದ ತೀರ್ಥ ಗುರು ಅಧ್ಯಾತ್ಮ ಮಂದಿರ, ಶ್ರೀ ಗುರು ದತ್ತಾತ್ರೇಯ ದೇವಾಲಯದಲ್ಲಿ ಶ್ರೀ ಗುರು ದತ್ತಾತ್ತೇಯ ಸ್ವಾಮಿಯ 38ನೇ ವಾರ್ಷಿಕೋತ್ಸವ ಪ್ರತಿಷ್ಠಾಪನಾ ಸುಸ್ಮರಣ ಮತ್ತು 108ನೇ ಶ್ರೀ ಸತ್ಯದತ್ತ ವ್ರತ ಮಹೋತ್ಸವ ಕಾರ್ಯಕ್ರಮವು ನಾಡಿದ್ದು ದಿನಾಂಕ 21ರ ಭಾನುವಾರ ನಡೆಯಲಿದೆ.

ಕಾಕಡಾರತಿ, ಗಣಪತಿ ಪೂಜೆ, ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ಹಾಗೂ ಬೆಳಿಗ್ಗೆ 10 ರಿಂದ 108 ಕಳಶಗಳ ಶ್ರೀ ಸತ್ಯದತ್ತವ್ರತ ಪೂಜಾ, ನಂತರ ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 2 ರಿಂದ ಭಜನಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

# ಅರಣ್ಯ ಸಂಪತ್ತು ಉಳಿದರೆ ಮಾತ್ರ ಜೀವ ಸಂಕುಲ

### ಹರಪನಹಳ್ಳಿ ನಿರ್ಗಮಿತ ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ ಕಳಕಳಿ

ಹರಪನಹಳ್ಳಿ,ಜು.19- ಅರಣ್ಯ ಸಂಪತ್ತು ಉಳಿದರೆ ಮಾತ್ರ ಮುಂದಿನ ಜೀವ ಸಂಕುಲವನ್ನು ಕಾಪಾಡಿಕೊಳ್ಳಲು ಸಾಧ್ಯ ಎಂದು ನಿರ್ಗಮಿತ ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ ಹೇಳಿದರು.

ಪಟ್ಟಣದ ತಾಲ್ಲೂಕು ವಲಯಅರಣ್ಯಾಧಿಕಾರಿ ಕಚೇರಿಯಲ್ಲಿ ಗುರುವಾರ ಸಂಜೆ ಅರಣ್ಯ ಸಿಬ್ಬಂದಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ತಾಪಮಾನದಲ್ಲಿ ಏರುಪೇರು ಉಂಟಾಗುತ್ತಿರುವುದನ್ನು ನೋಡಿದರೆ ಇದು ಮುಂದೆ ಮಾನವ ಸಂಕುಲಕ್ಕೆ ಅಪಾಯ ತಂದೊಡ್ಡುವ ಸಾಧ್ಯತೆ ಇದೆ, ಹಾಗಾಗಿ ನಾವೆಲ್ಲರೂ ಅರಣ್ಯ ಸಂಪತ್ತು ಉಳಿಸಿ ಬೆಳೆಸಲು ಮುಂದಾಗಬೇಕು ಎಂದರು.

ಹರಪನಹಳ್ಳಿಯಲ್ಲಿ ಕಳೆದ ಮೂರು ವರ್ಷಗಳಿಂದ ವಲಯ ಅರಣ್ಯ ಅಧಿಕಾರಿ ಯಾಗಿ ಕರ್ತವ್ಯ ನಿರ್ವಹಿಸಿರುವುದು ನನಗೆ ತೃಪ್ತಿ ತಂದಿದ್ದು, ಸಿಬ್ಬಂದಿ ನನಗೆ ಸಂಪೂರ್ಣ ಸಹಕಾರ ಕೊಟ್ಟಿದ್ದಾರೆ ಎಂದು ಸ್ಮರಿಸಿದರು.



ನೂತನ ವಲಯ ಅರಣ್ಯಾಧಿಕಾರಿ ರಾಜು ಗೊಂದಕರ್ ಮಾತನಾಡಿ, ಮಲ್ಲಪ್ಪ ಅವರು ಉತ್ಸಾಹಿ ಜೀವಿ, ಸದಾ ಕ್ರಿಯಾಶೀಲರಾಗಿರುತ್ತಾರೆ, ಅವರ ಅನುಭವವೇ ನಮಗೆ ಸ್ಫೂರ್ತಿದಾಯಕ ಎಂದರು.

ನಿರ್ಗಮಿತ ವಲಯ ಅರಣ್ಯಾಧಿಕಾರಿ ಕೆ. ಮಲ್ಲಪ್ಪ ಅವರ ಕುರಿತು ಅನೇಕ ಸಿಬ್ಬಂದಿಗಳು ಅನಿಸಿಕೆ ವ್ಯಕ್ತಪಡಿಸಿದರು.

ವಿವಿಧ ಸಂಘ-ಸಂಸ್ಥೆ, ರಾಜಕೀಯ ಮುಖಂಡರು ಅರಣ್ಯಾಧಿಕಾರಿ ಕೆ.ಮಲ್ಲಪ್ಪ ಅವರನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಹುಲಿಕಟ್ಟಿ ಚಂದ್ರಪ್ಪ, ಮೈದೂರು ರಾಮಣ್ಣ, ಓ.ಮಹಾಂತೇಶ, ಅರಣ್ಯ ಸಿಬ್ಬಂದಿ ಮಂಜ್ಯಾನಾಯ್ಕ್, ರಾಘವೇಂದ್ರ, ಕೊಟ್ರಪ್ಪ, ವೀರೇಶ, ಕೇದಾರನಾಥ, ರೋಹನ್, ಕರಿಬಸಯ್ಯ, ಚನ್ನಬಸಪ್ಪ, ಸೋಮನಾಯ್ಕ್, ಪತ್ರೆಪ್ಪ ಸೇರಿದಂತೆ ಇತರರು ಇದ್ದರು.

## ಮೆಳ್ಳೇಕಟ್ಟೆಯಲ್ಲಿ ಇಂದು ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ



ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ತಾಲ್ಲೂಕು ಮೆಳ್ಳೇಕಟ್ಟೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಡಾ.ಫ.ಗು. ಹಳಕಟ್ಟಿಯವರ ಜಯಂತಿ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಮತ್ತು ಆರ್. ರಮಾನಂದ ದತ್ತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮೆಳ್ಳೇಕಟ್ಟೆ ಸರ್ಕಾರಿ ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಎ.ಪಿ. ರವಿಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶರಣ ಸಾಹಿತ್ಯ ಪರಿಷತ್ತಿನ ದಾವಣಗೆರೆ ತಾಲ್ಲೂಕು ಘಟಕದ ಅಧ್ಯಕ್ಷ ಎಸ್.ಬಿ. ರುದ್ರಗೌಡ ಗೋಪನಾಳು ಅಧ್ಯಕ್ಷತೆ ವಹಿಸಲಿದ್ದು, 'ಫ.ಗು ಹಳಕಟ್ಟಿಯವರು ಮತ್ತು ವಚನಗಳಲ್ಲಿ ನೈತಿಕತೆ' ವಿಷಯ ಕುರಿತು ಶ.ಸಾ.ಪ. ದಾವಣಗೆರೆ ತಾ. ಘಟಕದ ಪ್ರಧಾನ ಕಾರ್ಯದರ್ಶಿ ಬಿ.ಎಂ. ವಿಶ್ವೇಶ್ವರಯ್ಯ ಹಾಗೂ 'ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರು' ವಿಷಯವಾಗಿ ಲೇಖಕರಾದ ಕು. ಬಿಂದು ಆರ್.ಡಿ. ರಾಂಪುರ ಅನುಭಾವ ನೀಡಲಿದ್ದಾರೆ ಎಂದು ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಸಿಜಿಕೆ, ಬಸವ ಜ್ಯೋತಿ ಪ್ರಶಸ್ತಿ ಪ್ರದಾನ



ಕರ್ನಾಟಕ ರಂಗ ಪರಿಷತ್ತು, ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ವೇದಿಕೆ ಕೂಲಂಬಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ರೋಟರಿ ಬಾಲಭವನದಲ್ಲಿ ಸಿಜಿಕೆ ಪ್ರಶಸ್ತಿ ಪ್ರದಾನ, ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ನಡೆಯಲಿದೆ.

ಪಾಂಡೋಮಟ್ಟಿ-ಕಮ್ಮತ್ತಹಳ್ಳಿ ವಿರಕ್ತಮಠದ ಡಾ. ಗುರುಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಂಗಕರ್ಮಿ ಹೆಚ್.ಎಸ್. ದ್ಯಾಮೇಶ್ ಕಾರ್ಯಕ್ರಮ ಉದ್ಘಾಟಿಸುವರು. ಬಸಾಪುರ ಶ್ರೀ ರೇವಣಸಿದ್ಧೇಶ್ವರ ವಿದ್ಯಾಸಂಸ್ಥೆ ಕಾರ್ಯದರ್ಶಿ ಎಂ.ಎಸ್. ನಾಗರಾಜಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ.ಎ.ಬಿ. ರಾಮಚಂದ್ರಪ್ಪ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ. ಮಲ್ಲಿಕಾರ್ಜುನ ಕಲಮರಳ್ಳಿ, ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್ ಭಾಗವಹಿಸಲಿದ್ದಾರೆ.

ಇದೇ ವೇಳೆ ಚಿಕ್ಕಬೆನ್ನೂರು ರಂಗಕರ್ಮಿ ಜಿ.ಹೆಚ್. ರುದ್ರೇಶ್ ಇವರಿಗೆ 'ಸಿಜಿಕೆ' ಪ್ರಶಸ್ತಿ ಹಾಗೂ ವಿಭೂತಿ ಬಸವಾನಂದರಿಗೆ 'ಬಸವ ಜ್ಯೋತಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕಲಾವಿದರಾದ ಬಿ.ಇ. ತಿಪ್ಪೇಸ್ವಾಮಿ ಮತ್ತು ಸಂಗಡಿಗರಿಂದ ಸುಗಮ ಸಂಗೀತ ಮತ್ತು ಬಿ.ಹನುಮಂತಾಚಾರ್ ಮತ್ತು ಸಂಗಡಿಗರಿಂದ ವೀರಗಾಸೆ ಪ್ರದರ್ಶನ ಇರುತ್ತದೆ.

## ಫಸಲ್ ಬಿಮಾ ಯೋಜನೆ ಜಾರಿ ನೋಂದಾಯಿಸಿಕೊಳ್ಳಲು ರೈತರಿಗೆ ಕರೆ

ದಾವಣಗೆರೆ, ಜು.19- ಜಿಲ್ಲೆಯಲ್ಲಿ 2024-25ನೇ ಸಾಲಿನ ಮುಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು ಜಾರಿಗೊಳಿಸಿದ್ದು, ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಬೆಳೆ ಸಾಲ ಪಡೆದ ಮತ್ತು ಪಡೆಯದ ರೈತರು ನೋಂದಾಯಿಸಿಕೊಳ್ಳಬಹುದು.

ಬೆಳೆ ಸಾಲ ಪಡೆದ ರೈತರನ್ನು ಬೆಳೆ ಸಾಲ ಮಂಜೂರು ಮಾಡುವಾಗ, ಕಡ್ಡಾಯವಾಗಿ ಬೆಳೆ ವಿಮೆಗೆ ಒಳಪಡಿಸಲಾಗುವುದು, ಬೆಳೆ ಸಾಲ ಪಡೆಯಲು ಇಚ್ಛೆಯುಳ್ಳ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ/ ಖಾತೆ ಪುಸ್ತಕ/ ಪಾಸ್ ಪುಸ್ತಕ/ ಕಂದಾಯ ರಶೀದಿ ಹಾಗೂ ಆಧಾರ ಸಂಖ್ಯೆಯನ್ನು ನೀಡಿ ಹತ್ತಿರದ ಬ್ಯಾಂಕ್, ಆರ್ಥಿಕ ಸಂಸ್ಥೆಗಳು ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ವಿಮಾ ಕಂತನ್ನು ಪಾವತಿಸಿ ನೋಂದಾಯಿಸಲು ವಿನಂತಿಸಿದೆ.

ಅರ್ಜಿಯೊಂದಿಗೆ ಆಧಾರ್ ಸಂಖ್ಯೆ ನಮೂದಿಸಿ, ನಿಗಧಿತ ದಿನಾಂಕದೊಳಗೆ ಬೆಳೆ ವಿಮೆಗೆ ನೋಂದಣಿ ಮಾಡಬೇಕು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ತೋಟಗಾರಿಕೆ ಇಲಾಖೆ, ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರಗಳನ್ನು ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಕೋರಿದ್ದಾರೆ.



## ಯಲವಟ್ಟಿಯಲ್ಲಿ ವಿಶಿಷ್ಟ ರೀತಿಯ ಅಜ್ಜಿ-ಹಬ್ಬ ಆಚರಣೆ

ಮಲೇಬೆನ್ನೂರು, ಜು. 19 - ಯಲವಟ್ಟಿ ಗ್ರಾಮದ ಸೇವಾಲಾಲ್ ತಾಂಡಾದಲ್ಲಿ ಎಲ್ಲಾ ಜನರು ಸೇರಿ ಶುಕ್ರವಾರ ಸಂಜೆ ಅಜ್ಜಿ ಹಬ್ಬವನ್ನು ಸಮೃದ್ಧಿ ಮಳೆ -ಬೆಳೆಗಾಗಿ ಮತ್ತು ರೋಗ ರುಜಿನಗಳು ಬಾರದಿರಲೆಂದು ಪ್ರಾರ್ಥಿಸಿ ವಿಶಿಷ್ಟ ರೀತಿಯಲ್ಲಿ ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

## ಮಲೇಬೆನ್ನೂರಿನಲ್ಲಿ ಸಂಭ್ರಮದ ಪರವು: ಅನ್ನಸಂತರ್ಪಣೆ



ಮಲೇಬೆನ್ನೂರು, ಜು.19- ಪಟ್ಟಣದ ಹರಳಹಳ್ಳಿ ರಸ್ತೆಯಲ್ಲಿರುವ ಶ್ರೀ ಏಕನಾಥೇಶ್ವರಿ ಅಮ್ಮನವರ ಊರ ಹೊರಗಿನ ದೇವಸ್ಥಾನದಲ್ಲಿ ಆಷಾಢ ಮಾಸದ ಅಂಗವಾಗಿ ಶುಕ್ರವಾರ ವಿಶೇಷ ಪೂಜೆ ಮತ್ತು ಅನ್ನ ಸಂತರ್ಪಣೆಯೊಂದಿಗೆ ಪರವು ಆಚರಿಸಲಾಯಿತು.

ಸಮೃದ್ಧಿ ಮಳೆ ಬೆಳೆಗಾಗಿ ಮತ್ತು ರೈತರ, ಸಾರ್ವಜನಿಕರ ಕಲ್ಯಾಣಕ್ಕಾಗಿ ಪ್ರಾರ್ಥಿಸಿ, ಬೆಳಗ್ಗೆ ಅಮ್ಮನವರಿಗೆ ಅಭಿಷೇಕದೊಂದಿಗೆ ಗ್ರಾಮಸ್ಥರು ಪೂಜೆ ಸಲ್ಲಿಸಿದರು. ಶ್ರೀ ಕೋಡಿಮರೇಶ್ವರಿ, ಹಟ್ಟಿದುರ್ಗಮ್ಮ ದೇವತೆಗಳನ್ನು ಪಟ್ಟಣದ ರಾಜ ಬೀದಿಗಳಲ್ಲಿ ಮೆರವಣಿಗೆ ಮುಖಾಂತರ ಗಂಗೆ ಪೂಜೆ ಸಲ್ಲಿಸಿ, ಜೋಗಮ್ಮಗಳಿಗೆ ಉಡಿ ತುಂಬಿಸಿ ಮಹಾಮಂಗಳಾರತಿ ನಂತರ ಅನ್ನ ಸಂತರ್ಪಣೆಗೆ ಚಾಲನೆ ನೀಡಲಾಯಿತು.

## ಬಿಜೆಪಿಗರು ಭ್ರಷ್ಟಾಚಾರದ ಪಿತಾಮಹರು

(1ನೇ ಪುಟದಿಂದ) ದಾಖಲೆಗಳನ್ನು ಬಯಲು ಮಾಡುತ್ತೇವೆ. ಅಕ್ರಮಗಳ ಹಿಂದೆ ಯಾವ ಮಂತ್ರಿ, ಅಧ್ಯಕ್ಷರು, ಮುಖ್ಯಮಂತ್ರಿಗಳು ಇದ್ದರು ಎಂದು ಜನರಿಗೆ ತಿಳಿಸುತ್ತೇವೆ ಎಂದು ಹೇಳಿದರು.

ಮುಖ್ಯಮಂತ್ರಿ ಹುದ್ದೆಗೆ 2,500 ಕೋಟಿ ರೂ., ಮಂತ್ರಿ ಸ್ಥಾನಕ್ಕೆ 100 ಕೋಟಿ ರೂ. ನೀಡಬೇಕು ಎಂಬ ಬಸನಗೌಡ ಪಾಟೀಲ್ ಯತ್ನಾಳ್ ಆರೋಪ ಹಾಗೂ ಭೋವಿ ನಿಗಮದ ಅಕ್ರಮದ ಬಗ್ಗೆ ಗೂಳಿಹಟ್ಟಿ ಶೇಖರ್ ಆರೋಪಗಳ ಕುರಿತು ಅಂದು ಬಿಜೆಪಿ ಏಕೆ ತನಿಖೆ ನಡೆಸಲಿಲ್ಲ ? ಎಂದು ಪ್ರಶ್ನಿಸಿದರು.

ಭ್ರಷ್ಟಾಚಾರ ಹಗರಣಗಳ ತನಿಖೆ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಆ ವಿಚಾರದ ಮೇಲೆ ಚರ್ಚೆಗೆ ಅವಕಾಶವಿಲ್ಲ. ಆದರೆ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಬೆಲೆಕೊಟ್ಟು ಸದನದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಲಾಗಿದೆ. ಅಕ್ರಮ ಎಸಗಿದ್ದರೆ ಯಾವುದೇ ಅಧಿಕಾರಿ, ಮಂತ್ರಿ, ಶಾಸಕ, ಯಾರೇ ಆಗಿರಲಿ ರಕ್ಷಿಸುವ ಉದ್ದೇಶ ನಮಗಿಲ್ಲ ಎಂದರು.

ವಾಲ್ಮೀಕಿ ನಿಗಮದ 89 ಕೋಟಿ ರೂ. ತೆಲಂಗಾಣಕ್ಕೆ ಅಕ್ರಮ ವರ್ಗಾವಣೆ ಆದ ಹಗರಣ ತನಿಖೆಗೆ ಎಸ್‌ಐಟಿ ರಚನೆ ಮಾಡಲಾಗಿದೆ. ತನಿಖಾ ತಂಡ ಸುಮಾರು 36 ಕೋಟಿ ರೂ.ಗಳಷ್ಟು ವಶಪಡಿಸಿಕೊಂಡಿದೆ ಎಂದು ಹೇಳಿದರು. ಬ್ಯಾಂಕ್ ಅಧಿಕಾರಿ ಒಂದೇ ದಿನದಲ್ಲಿ ಕೋಟ್ಯಂತರ ರೂ. ಸಾಲ ಮಂಜೂರು ಮಾಡಿದ್ದು, ಈ ಪ್ರಕರಣದ ಹಿನ್ನೆಲೆಯಲ್ಲಿ ಕೇಂದ್ರ ಹಣಕಾಸು ಸಚಿವರನ್ನು ಹೊಣೆಗಾರರನ್ನಾಗಿ ಮಾಡಲು ಆಗುತ್ತದೆಯೇ, ಪ್ರತಿಪಕ್ಷಗಳು ಉತ್ತರ ಕೊಡಬೇಕು ಎಂದರು.

# ಕನ್ನಡಿಗರ ಉದ್ಯೋಗ ಮೀಸಲಾತಿಗೆ ತಡೆ ನೀಡಿದ ಕ್ರಮ ಸರಿಯಲ್ಲ



ದಾವಣಗೆರೆ, ಜು. 19- ಕ.ರ.ವೇ. ಹೋರಾಟದ ಫಲವಾಗಿ ರಾಜ್ಯ ಸರ್ಕಾರ ಕನ್ನಡಿಗರಿಗೆ ಉದ್ಯೋಗ ಮೀಸಲಾತಿಯನ್ನು ಜಾರಿಗೊಳಿಸಲು ಅಧಿವೇಶನದಲ್ಲಿ ಅಂಗೀಕಾರ ಮಾಡಿದ್ದು ಕೆಲವು ಉದ್ಯಮಿಗಳು ವಿರೋಧ ವ್ಯಕ್ತಪಡಿಸಿದ್ದಕ್ಕೆ ಈಗ ತಡೆ ಹಿಡಿದಿರುವುದು ಖಂಡನೀಯ ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಪತ್ರಿಕಾ ಹೇಳಿಕೆ ನೀಡಿರುವ ಅವರು ರಾಜ್ಯದಲ್ಲಿನ ಉದ್ಯಮಿಗಳು ಸರ್ಕಾರದ ಎಲ್ಲಾ ಸವಲತ್ತುಗಳನ್ನು ರಿಯಾಯಿತಿ ದರದಲ್ಲಿ ಪಡೆದುಕೊಂಡು, ಬೆಂಗಳೂರಿನಂತ ನಗರದಲ್ಲಿ ಬೃಹತ್ ಕಂಪೆನಿಗಳನ್ನು ನಡೆಸುತ್ತಾ ಆದಾಯ ಮಾಡಿಕೊಳ್ಳುತ್ತಿದ್ದಾರೆ. ಆದರೆ ಇವರು ಕನ್ನಡಿಗರಿಗೆ ಉದ್ಯೋಗ ಕೊಡುವುದಕ್ಕೆ ಮೀನಾಮೇಷ ಎಣಿಸುತ್ತಾರೆ. ಇದು ಸರಿಯಲ್ಲ ಎಂದು ಹೇಳಿದರು.

ಕನ್ನಡಿಗರಿಗೆ ಕೌಶಲ್ಯ ಅಭಿವೃದ್ಧಿ ಇಲ್ಲ ಎಂದು ಕುಂಟು ನೆಪ ಹೇಳುತ್ತಾರೆ. ಆದರೆ ಇದೇ ಕನ್ನಡಿಗರನ್ನು ಅಮೆರಿಕ, ಯುರೋಪ್, ಇಂಗ್ಲೆಂಡ್, ಜರ್ಮನಿಯಲ್ಲಿನ ದೊಡ್ಡ ದೊಡ್ಡ ಕಂಪನಿಗಳಲ್ಲಿ ಉದ್ಯೋಗಕ್ಕಾಗಿ ಆಹ್ವಾನಿಸಲಾಗುತ್ತದೆ. ಆದರೆ ನಮ್ಮ ರಾಜ್ಯದಲ್ಲಿನ ನಮ್ಮ ಮತ್ತು ಹೊರ ರಾಜ್ಯದಿಂದ ಬಂದಂತಹ ಉದ್ಯಮಿಗಳು ಕನ್ನಡಿಗರಿಗೆ ಉದ್ಯೋಗ ಕೊಡುವಲ್ಲಿ ವಿಫಲವಾಗಿವೆ ಎಂದು ಹೇಳಿದ್ದಾರೆ.

ಕಳೆದ 25 ವರ್ಷಗಳಿಂದ ಡಾ. ಸರೋಜಿನಿ ಮಹಿಷಿ ವರದಿ ಜಾರಿಗೆ ತರಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಹೋರಾಟ ಮಾಡುತ್ತಾ ಬಂದಿದೆ. ಯಾವ ಸರ್ಕಾರವು ಸಹ ಇದರ ಬಗ್ಗೆ ಗಮನ ಹರಿಸುತ್ತಿಲ್ಲ.

ಕಳೆದ ಜುಲೈ ಒಂದರಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾದ್ಯಂತ ಪ್ರತಿಭಟನೆ ಮಾಡಿದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿವೇಶನದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಮಸೂದೆ ಮಂಡಿಸಲು ಮತ್ತು ಕಾನೂನು ರೂಪಿಸಲು ಮುಂದಾಗಿದ್ದರು. ಕೆಲವು ಕನ್ನಡದ ದ್ರೋಹಿಗಳು ಇದನ್ನು ವಿರೋಧಿಸಿದ್ದಾರೆ ಎಂದು ತಿಳಿಸಿದರು. ಇಂಥವರ ವಿರುದ್ಧ ಮತ್ತು ಸರ್ಕಾರದ ವಿರುದ್ಧ ಹೋರಾಟ ಮಾಡುವುದು ಅನಿವಾರ್ಯವಾಗಿದೆ ಎಂದು ಕರವೇ ಜಿಲ್ಲಾ ಅಧ್ಯಕ್ಷ ಎಂ.ಎಸ್. ರಾಮೇಗೌಡ ಹೇಳಿಕೆಯಲ್ಲಿ ತಿಳಿಸಿದ್ದಾರೆ.

### ಭದ್ರಾ ಜಲಾಶಯ



ನೀರಿನ ಮಟ್ಟ : 157 ಅಡಿ 11 ಇಂಚು
ಒಳ ಹರಿವು : 49555 ಕ್ಯೂಸೆಕ್ಸ್
ಹೊರ ಹರಿವು : 181 ಕ್ಯೂಸೆಕ್ಸ್
ಕಳೆದ ವರ್ಷ : 141 ಅಡಿ 7 ಇಂಚು

## ಬಾತಿಯಲ್ಲಿ ಇಂದು ವನ ಮಹೋತ್ಸವ

ದಾವಣಗೆರೆ : ಹಳೇಬಾತಿ ಗ್ರಾಮ ಪಂಚಾಯತಿ ವತಿಯಿಂದ ವನ ಮಹೋತ್ಸವ ಕಾರ್ಯಕ್ರಮವನ್ನು ಇಂದು ಬಾತಿ ಗುಡ್ಡದಲ್ಲಿ ಹಮ್ಮಿಕೊಳ್ಳಲಾಗಿದೆ.

## ಹೋರಾಟಗಾರರ ಮೇಲೆ ಗುಂಡು

(1ನೇ ಪುಟದಿಂದ) ಸುದ್ದಿ ಸಂಸ್ಥೆಗಳು ಮೃತರ ಸಂಖ್ಯೆ 17 ಎಂದು ಹೇಳಿದ್ದರೆ, ಇನ್ನು ಕೆಲವು 30 ಎಂದು ತಿಳಿಸಿವೆ. ಗುರುವಾರದಂದು 22 ಜನ ಸಾವನ್ನಪ್ಪಿದ್ದರು ಎಂದು ಸ್ಥಳೀಯ ಸುದ್ದಿಸಂಸ್ಥೆಗಳು ವರದಿ ಮಾಡಿವೆ.

ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಆವರಣದಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಕ್ಯಾಂಪಸ್‌ಗಳ ಭದ್ರತೆಗೆ ಪೊಲೀಸ್ ಹಾಗೂ ಅರೆ ಸೇನಾ ಪಡೆಗಳನ್ನು ರವಾನಿಸಲಾಗಿದೆ.

ಇಂಟರ್‌ನೆಟ್ ಹಾಗೂ ಮೊಬೈಲ್ ಸೇವೆಗಳಿಗೆ ಗುರುವಾರದಿಂದ ಅಡ್ಡಿ ಎದುರಾಗಿದೆ. ಸಾಮಾಜಿಕ ಜಾಲತಾಣಗಳ ಸಂಪರ್ಕ ಸಹ ಕುಂಠಿತವಾಗಿದೆ. ಪ್ರತಿಭಟನಾಕಾರರು ಗುರುವಾರ ದೂರಸಂಪರ್ಕ ಕೇಂದ್ರದ ಮೇಲೆ ದಾಳಿ ನಡೆಸಿ ಕೆಲ ಉಪಕರಣಗಳಿಗೆ ಬೆಂಕಿ ಹಚ್ಚಿದ್ದಾರೆ. ಇದರಿಂದಾಗಿ ಅಂತರ್ಜಾಲ ಸೇವೆಗೆ ಸಮಸ್ಯೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಹೊನ್ನಾಳಿ : ಇಂದು ವಿದ್ಯುತ್ ಗ್ರಾಹಕರ ಸಭೆ


ಹೊನ್ನಾಳಿ ಬೆಸ್ಕಾಂ ಉಪ ವಿಭಾಗದ ವತಿಯಿಂದ ಕಚೇರಿ ಆವರಣದಲ್ಲಿ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ವಿದ್ಯುತ್ ಗ್ರಾಹಕರ ಸಂವಾದ ಏರ್ಪಡಿಸಲಾಗಿದೆ ಎಂದು ಬೆಸ್ಕಾಂ ಎಇಇ ಜಯಪ್ಪ ತಿಳಿಸಿದ್ದಾರೆ.

## ಹರಿಹರ : ನಾಳೆ ಗುರು ಪೂಣಿಮೆ

ಹರಿಹರ, ಜು. 19- ನಗರದ ಜೆ.ಸಿ.ಬಡಾವಣೆ 1 ನೇ ಮೇನ್, 1 ಕ್ರಾಸ್‌ನಲ್ಲಿರುವ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ನಾಡಿದ್ದು ದಿನಾಂಕ 21 ರ ಭಾನುವಾರ 'ಗುರು ಪೂರ್ಣಿಮೆ' ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 6 ರಿಂದ 7 ರವರೆಗೆ ವಿಷ್ಣು ಸಹಸ್ರನಾಮ ಪಾರಾಯಣ ಹಾಗೂ ದಿವ್ಯತ್ರಯರ ಅಷ್ಟೋತ್ತರ ಪಠಣ, 7 ರಿಂದ 8 ರವರೆಗೆ ವಿಶೇಷ ಪೂಜೆ, 9.45 ರಿಂದ 11 ಹೋಮ ಸ್ವಾಮಿ ಕರುಣಾನಂದಜೀ ಮಹಾರಾಜ್ ಅವರಿಂದ, 11 ರಿಂದ 11.20 ತ್ರಿವೇಣಿ ಸಿ.ಎನ್. ಚಿರಡೋಣಿ ಅವರಿಂದ ಭಜನೆ, 11.20 ರಿಂದ 12 ಸ್ವಾಮಿ ಶಾರದೇಶಾನಂದ ಜೀ ಇವರಿಂದ ಭಜನೆ, 12 ಕ್ಕೆ ಡಾ. ಶಾರದಾದೇವಿ ಆರ್.ಹೆಚ್.ಇವರಿಂದ 'ಗುರು ಪೂಣಿಮೆಯ ಮಹತ್ವ' ಕುರಿತು ಉಪನ್ಯಾಸ, 12.25 ಕ್ಕೆ ಸ್ವಾಮಿ ಶಾರದೇಶಾನಂದ ಜೀ ಇವರಿಂದ 'ಶ್ರೀ ಗುರು ಮಹಿಮೆ' ಕುರಿತು ಉಪನ್ಯಾಸ, ನಂತರ 12.55 ಕ್ಕೆ ಮಹಾಮಂಗಳಾರತಿ, ಮಹಾಪ್ರಸಾದ ವಿತರಿಸಲಾಗುವುದು.

## ಭದ್ರಾ ಡ್ಯಾಮ್‌ಗೆ 50 ಸಾವಿರ ಕ್ಯೂಸೆಕ್ಸ್ ಒಳ ಹರಿವು



ಶಿವಮೊಗ್ಗ, ಜು.19- ಮಲೆನಾಡಿನಲ್ಲಿ ಮುಂಗಾರು ಮಳೆ ಮುಂದುವರಿದಿದ್ದು, ತುಂಗಾ ಮತ್ತು ಭದ್ರಾ ನದಿಗಳಲ್ಲಿ ನೀರಿನ ಹರಿವು ಶುಕ್ರವಾರ ಇನ್ನಷ್ಟು ಹೆಚ್ಚಾಗಿದೆ. ಗಾಜನೂರಿನ ತುಂಗಾ ಜಲಾಶಯಕ್ಕೆ ಬಾರಿ ಪ್ರಮಾಣದ ಒಳಹರಿವು ಇದ್ದು, ಅಷ್ಟೇ ಪ್ರಮಾಣದ ನೀರನ್ನು ಡ್ಯಾಮ್‌ನ ಎಲ್ಲಾ ಕ್ರೆಸ್ಟ್ ಗೇಟುಗಳನ್ನು ತೆರೆದು ನದಿಗೆ ಬೀಡಲಾಗಿದೆ. ಇದರಿಂದಾಗಿ ತುಂಗಭದ್ರಾ ನದಿಯಲ್ಲಿ ನೀರು ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ನದಿ ಪಾತ್ರದಲ್ಲಿ ಪ್ರವಾಹ ಭೀತಿ ಸೃಷ್ಟಿಸಿದೆ.


**ಭದ್ರಾ ಒಳ ಹರಿವು ಇನ್ನಷ್ಟು ಹೆಚ್ಚಳ :** ಭದ್ರಾ ಜಲಾಶಯಕ್ಕೆ ಗುರುವಾರ 45 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಶುಕ್ರವಾರ 50 ಸಾವಿರ ಕ್ಯೂಸೆಕ್ಸ್‌ಗೆ ಏರಿಕೆ ಆಗಿತ್ತು. ಶುಕ್ರವಾರ ಸಂಜೆ ಜಲಾಶಯದ ನೀರಿನ ಮಟ್ಟ 160 ಅಡಿ ದಾಟಿದ್ದು, ಕಳೆದ ವರ್ಷ ಈ ದಿನ ಜಲಾಶಯದಲ್ಲಿ 141 ಅಡಿ ನೀರಿತ್ತು. ಜಲಾಶಯದ ಗರಿಷ್ಟ ಮಟ್ಟ 186 ಅಡಿಗಳಾಗಿದ್ದು ಜಲಾಶಯ ಭರ್ತಿಗೆ 26 ಅಡಿ ಮಾತ್ರ ಬಾಕಿ ಇದೆ.

## ಸಾಮೂಹಿಕ ಗಾಯತ್ರಿ ಪೂಜೆ, ಉಪಾಸನೆ

ದಾವಣಗೆರೆ, ಜು.19- ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಅಧ್ಯಾತ್ಮ ಸಂಸ್ಥೆ ಮತ್ತು ಗಾಯತ್ರಿ ಪರಿವಾರದಿಂದ ನಗರದ ಜಯದೇವ ವೃತ್ತದಲ್ಲಿನ ಶ್ರೀ ಶಂಕರ ಮಠದಲ್ಲಿ ಇದೇ ದಿನಾಂಕ 21ರ ಬೆಳಗ್ಗೆ 7ಕ್ಕೆ ಗುರು ಪೂರ್ಣಿಮೆ ಅಂಗವಾಗಿ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಅಧ್ಯಾತ್ಮ ಸಮಾರಂಭದ ಪೂಜಾ ಸೇವಾಕರ್ತರು ಡಾ. ರಮೇಶ್ ಪಟೇಲ್ ಮತ್ತು ಕುಟುಂಬದವರಾಗಿ ದ್ದಾರೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## 19ನೇ ಪುಣ್ಯಸ್ಮರಣೆ



ಲಿಂ॥ ಸಣ್ಣಗೌಡ್ರ ಕೆ.ಜಿ. ಲಿಂಗಪ್ಪ

ಕೊಗ್ಗನೂರು.

"ನಿಮ್ಮ ಮಾರ್ಗದರ್ಶನವೇ ನಮಗೆ ದಾರಿದೀಪ"

ಶ್ರೀಮತಿ ಕೆ.ಜಿ. ಬಸಮ್ಮ, ಸಣ್ಣಗೌಡ್ರ ಲಿಂಗಪ್ಪ ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

### ಗಾಂಧಿನಗರದ ಬಿ.ವಿ. ಆಂಜನೇಯ ನಿಧನ



ದಾವಣಗೆರೆ ಗಾಂಧಿನಗರದ 5ನೇ ಕ್ರಾಸ್ ನಿವಾಸಿಯಾದ ಬಾತಿ ವಾಸಪ್ಪ ಅವರ ಪುತ್ರ ಸಿ.ಟಿ. ಸೆಂಟ್ರಲ್ ಆಸ್ಪತ್ರೆಯ ನೌಕರ ಬಿ.ವಿ. ಆಂಜನೇಯ (42) ಇವರು ದಿನಾಂಕ 19.7.2024ರ ಶುಕ್ರವಾರ ರಾತ್ರಿ 12ಕ್ಕೆ ನಿಧನರಾದರು. ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.07.2024ರ ಶನಿವಾರ ಮಧ್ಯಾಹ್ನ 1 ಕ್ಕೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

## ಕ್ಷುಲ್ಲಕ ಅರ್ಜಿ ದಾಖಲಿಸಿದ ಮಾಜಿ ಐಎಎಸ್ ಅಧಿಕಾರಿಗೆ ಲಕ್ಷ ರೂ. ದಂಡ

ಜಮ್ಮು, ಜು. 19 - ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಇತರೆ ಹಿರಿಯ ಅಧಿಕಾರಿಗಳ ವಿರುದ್ಧ ಕ್ಷುಲ್ಲಕ ಅರ್ಜಿ ದಾಖಲಿಸಿದ ಕಾರಣಕ್ಕಾಗಿ ಮಾಜಿ ಐಎಎಸ್ ಅಧಿಕಾರಿ ಒಬ್ಬರಿಗೆ ಕೇಂದ್ರ ಆಡಳಿತಾತ್ಮಕ ಟ್ರಿಬ್ಯೂನಲ್‌ನ ಜಮ್ಮು ಪೀಠ 1 ಲಕ್ಷ ರೂ. ದಂಡ ವಿಧಿಸಿದೆ.

ಮಾಜಿ ಐಎಎಸ್ ಅಧಿಕಾರಿ ಕುಮಾರ್ ರಂಚೋಡ್‌ಭಾಯಿ ಪರ್ಮರ್ ಅವರು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಹಾಗೂ ಇತರೆ ಅಧಿಕಾರಿಗಳನ್ನು ಪೀಡಿಸುವ ಸಲುವಾಗಿ ಅರ್ಜಿ ದಾಖಲಿಸಿದ್ದಾರೆ ಎಂದು ಟ್ರಿಬ್ಯೂನಲ್ ಆದೇಶದಲ್ಲಿ ತಿಳಿಸಲಾಗಿದೆ.

ಸೇವಾ ಸಂಬಂಧಿತ ವಿಷಯದಲ್ಲಿ ಅವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಮನವಿ ಸಲ್ಲಿಸಬೇಕಿತ್ತು. ಆದರೆ ಪರ್ಮರ್ ಅವರು ಲೆಫ್ಟಿನೆಂಟ್ ಗವರ್ನರ್ ಹಾಗೂ ಅಧಿಕಾರಿಗಳ ವಿರುದ್ಧ ದೂರು ಸಲ್ಲಿಸಿದ್ದಾರೆ. ಸಂವಿಧಾನ ಹಾಗೂ ಕಾನೂನುಗಳ ಅಪಾರ ತಿಳುವಳಿಕೆ ಇರುವ ಹಿರಿಯ ಐಎಎಸ್ ಅಧಿಕಾರಿ ಈ ರೀತಿಯ ಅರ್ಜಿ ಸಲ್ಲಿಸಿರುವುದು ಆಶ್ಚರ್ಯಕರ ಎಂದು ಟ್ರಿಬ್ಯೂನಲ್ ಹೇಳಿದೆ.

## ಹರಿಹರದ ಮರ್ಚೆಂಟ್ಸ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಕಳ್ಳತನ

ಹರಿಹರ, ಜು.19- ನಗರದ ಮರ್ಚೆಂಟ್ಸ್ ಕೋ-ಆಪರೇಟಿವ್ ಸೊಸೈಟಿಯ ಬಾಗಿಲ ಬೀಗ ಮುರಿದು 33 ಸಾವಿರ ರೂ. ಕಳ್ಳತನ ಮಾಡಿದ ಘಟನೆ ಮೊನ್ನೆ ನಡೆದಿದೆ. ಸೊಸೈಟಿ ಅಧ್ಯಕ್ಷ ಹೆಚ್.ಎಂ. ನಾಗರಾಜ್ ನೀಡಿದ ದೂರಿನ ಅನ್ವಯ ಸಿಪಿಐ ದೇವಾನಂದ್, ಅಪರಾಧ ವಿಭಾಗದ ಎಸ್‌ಐ ವಿಜಯಕುಮಾರ್, ದಾವಣಗೆರೆ ಬೆರಳಚ್ಚು ಅಧಿಕಾರಿಗಳ ತಂಡ ಭೇಟಿ ಕೊಟ್ಟು ಪರಿಶೀಲನೆ ನಡೆಸಿದೆ.

## ವಿದ್ಯುತ್ ಸ್ಪರ್ಷದಿಂದ ಕೋತಿಗಳ ಸಾವು : ಯುವಕರಿಂದ ಅಂತ್ಯಕ್ರಿಯೆ



ದಾವಣಗೆರೆ, ಜು. 19- ವಿದ್ಯುತ್ ಸ್ಪರ್ಷದಿಂದಾಗಿ ಎರಡು ಕೋತಿಗಳು ಸಾವನ್ನಪ್ಪಿದ ಘಟನೆ ಹಳೇ ಕುಂದುವಾಡದಲ್ಲಿ ಶುಕ್ರವಾರ ನಡೆಯಿತು. ಆಟವಾಡುತ್ತಿದ್ದ ತಾಯಿ ಹಾಗೂ ಮರಿ ಕೋತಿಗೆ ವಿದ್ಯುತ್ ತಂತಿ ತಗುಲಿ ಸ್ಥಳದಲ್ಲಿಯೇ ಸಾವನ್ನಪ್ಪಿದವು. ಈ ವೇಳೆ ಗ್ರಾಮದ ಯುವಕರು ಅವುಗಳಿಗೆ ಪೂಜೆ ಸಲ್ಲಿಸಿ ಜೈ ಭಜರಂಗಿ ಎಂದು ಘೋಷಣೆ ಕೂಗುತ್ತಾ ಆಟೋದಲ್ಲಿ ಮೆರವಣಿಗೆ ನಡೆಸಿ ನಂತರ ಅಂತ್ಯಕ್ರಿಯೆ ನಡೆಸಿದರು.

# ಜಿಲ್ಲೆಯಲ್ಲಿ ತುರ್ತಾಗಿ ಆಗಬೇಕಿರುವ ಕೃಷಿ ಚಟುವಟಿಕೆ ನಿರ್ವಹಣೆ

ದಾವಣಗೆರೆ, ಜು.19- ಜಿಲ್ಲೆಯಲ್ಲಿ ಇದುವರೆಗೂ ಮಳೆ ಪ್ರಮಾಣ ಕಡಿಮೆ ಇದ್ದು, ಕಳೆದ ಕೆಲ ದಿವಸಗಳಿಂದ ಚೆನ್ನಾಗಿ ಮಳೆ ಆಗುತ್ತಿದೆ. ಮಳೆ ಮುಂದುವರಿಯುವ ಸಾಧ್ಯತೆ ಕಡಿಮೆ ಆಗುವ ಸಾಧ್ಯತೆ ಹಿನ್ನೆಲೆಯಲ್ಲಿ, ಬೆಳೆಗಳ ನಿರ್ವಹಣೆ ಕುರಿತು ಕೆಲವು ಸಲಹೆಗಳನ್ನು ಕೃಷಿ ಇಲಾಖೆ ನೀಡಿದೆ.

* ಮೇಲು ಗೊಬ್ಬರಗಳನ್ನು ಬೆಳೆಯ ಪಕ್ಕ ಬುಡದಿಂದ 4 ಇಂಚು ದೂರ ಮತ್ತು 4 ಇಂಚು ಆಳದಲ್ಲಿ ಕೊಟ್ಟು ಮಣ್ಣಿನಲ್ಲಿ ಮುಚ್ಚಬೇಕು. ಯಾವುದೇ ಕಾರಣಕ್ಕೂ ಯೂರಿಯಾ ಅಥವಾ ಇನ್ನಾವುದೇ ಗೊಬ್ಬರವನ್ನು ಎರಚಬಾರದು. ಯೂರಿಯ ಬಳಕೆಯ ಪ್ರಮಾಣ ಎಕರೆಗೆ 25 ಕೆಜಿ ಮೀರಬಾರದು. ಹೆಚ್ಚಿನ ಪ್ರಮಾಣದಲ್ಲಿ ಯೂರಿಯಾ ರಸಗೊಬ್ಬರವನ್ನು ಬಳಕೆ ಮಾಡಿದಲ್ಲಿ, ತದನಂತರದ ದಿವಸಗಳಲ್ಲಿ ಮಳೆ ಕೊರತೆಯಾದರೆ ಬೆಳೆಗಳಿಗೆ ತೀವ್ರತರವಾದ ತೊದರೆಯುಂಟಾಗುವುದು

* ಕೇವಲ ಯೂರಿಯ ಬಳಕೆಯಿಂದ ಬೆಳೆಗಳು ಶೀತಬಾಧೆಯಿಂದ ಚೇತರಿಸಿಕೊಳ್ಳಲಾರವು.

* ಈಗ ಬರುತ್ತಿರುವ ಮಳೆಯನ್ನು ಸದುಪಯೋಗಪಡಿಸಿಕೊಳ್ಳಲು, ಬೆಳೆಯ ಹಂತ ನೋಡಿಕೊಂಡು ಪ್ರತಿ ಲೀಟರ್ ನೀರಿಗೆ 5-8 ಗ್ರಾಂ 19:19:19 ನ್ನು ಮತ್ತು 5 ಮಿಲೀ ಲಘು ಪೋಷಕಾಂಶ ಮಿಶ್ರಣ ಬೆರೆಸಿಕೊಂಡು ಸಿಂಪಡಣೆ ಮಾಡಬೇಕು. ಕೇವಲ ಲಘು ಪೋಷಕಾಂಶ ಸಿಂಪಡಣೆ ಮಾಡದೇ, ಪ್ರಧಾನ ಪೋಷಕಾಂಶಗಳ ಸಿಂಪಡಣೆ ಸಹ ಅಗತ್ಯ.

* 45 ದಿನಗಳ ಹಂತದ ಮೆಕ್ಕೆಜೋಳ ಬೆಳೆಯಲ್ಲಿ ಈಗಾಗಲೇ ಗಟ್ಟಿ ಗೊಬ್ಬರ ಮತ್ತು ಮೇಲು ಗೊಬ್ಬರಗಳನ್ನು ಕೊಟ್ಟಾಗಿದ್ದರೆ, ನ್ಯಾನೋ ಯೂರಿಯಾ 2.5 ಮಿಲಿಯನ್ನು ಪ್ರತಿ ಲೀಟರ್ ನೀರಿಗೆ ಸೇರಿಸಿದ ದ್ರಾವಣವನ್ನು ಸಿಂಪಡಿಸುವು ದರಿಂದ ಬೆಳೆ ಉತ್ತಮವಾಗಿ ಚೇತರಿಸಿಕೊಳ್ಳುವುದು.

* ಎಲೆ ತಿನ್ನುವ ಕೀಟ ಬಾಧೆ ಇದ್ದು, ಚಿಕ್ಕ ಹುಳುಗಳು ಇದ್ದರೆ 0.5 ಗ್ರಾಂ, ಇಮಾಮೆಕ್ಟಿನ್ ಬೆಂಜೋಯೇಟ್ ದೊಡ್ಡ ಹುಳುಗಳು ಇದ್ದರೆ ಕ್ಲೋರಂಟ್ರನಿಲಿಪೋಲ್ 0.4 ಮಿಲೀ ಪ್ರತಿ ಲೀ ನೀರಿಗೆ ಬೆರೆಸಿಕೊಂಡು ಸಿಂಪರಣೆ ಮಾಡಬೇಕು. ಮಳೆ ಕಡಿಮೆಯಾಗಿ ಮೆಕ್ಕೆಜೋಳದಲ್ಲಿ ಲದ್ದಿ ಹುಳು ಬಾಧೆ ಮುಂದುವರೆದರೆ, ಪ್ರತಿಯೊಂದು ಸುಳಿ ತುಂಬುವಂತೆ ಮತ್ತು ಸಮಗ್ರವಾಗಿ ಇಮಾಮೆಕ್ಟಿನ್ ಬೆಂಜೋಯೇಟ್ ಅಥವಾ ಕ್ಲೋರಂಟ್ರನಿಲಿಪೋಲ್ ಸಿಂಪಡಣೆ ಮಾಡಬೇಕು.

* ಹೆಚ್ಚಿನ ತೇವದಿಂದ ಹತ್ತಿ ಮತ್ತು ಶೇಂಗಾ ಬೆಳೆಯಲ್ಲಿ ಬುಡ ಕೊಳೆ ರೋಗ (ಗಿಡಗಳು ಬಾಡುವುದು) ಕಂಡು ಬಂದಲ್ಲಿ, ಗಿಡಗಳ ಬುಡಕ್ಕೆ ಕಾರ್ಬಡೈಜಿಂ 3 ಗ್ರಾಂ ಪ್ರತಿ ಲೀ ನೀರಿಗೆ ಸೇರಿಸಿ ತಯಾರಿಸಿದ ದ್ರಾವಣವನ್ನು ಸುರಿಯಬೇಕು.

* ಒಟ್ಟಾರೆಯಾಗಿ ಹೊಲದಲ್ಲಿ ನೀರು ನಿಲ್ಲದಂತೆ, ಸರಾಗವಾಗಿ ಹರಿದು ಹೋಗುವಂತೆ ಕ್ರಮಗಳನ್ನು ಅನುಸರಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಮೀಪದ ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಕೋರಿದ್ದಾರೆ.

# ಖಾಸಗಿ ವಲಯದಲ್ಲಿ 'ಮತ್ತೆ' ಮೀಸಲಾತಿಯೇ ?

## ಇಂದು ಕನ್ನಡಿಗ ಮೀಸಲಾತಿಯಾದರೆ, ನಾಳೆ 'ಅಹಿಂದ' ಮೀಸಲಾತಿಯಲ್ಲಿ ಸಂಶಯವಿಲ್ಲ

ರಾಜ್ಯದಲ್ಲಿ 'ಮತ್ತೆ' ಖಾಸಗಿ ವಲಯದಲ್ಲಿ ಮೀಸಲಾತಿ ಜಾರಿಗೆ ತರಲು ಚಿಂತನೆಗಳು ನಡೆದಿವೆ. ಮತ್ತೆ ಎಂದು ಏಕೆ ಹೇಳುತ್ತಿದ್ದೇನೆ ಎಂದರೆ, ಭಾರತದಲ್ಲಿ ಸಾವಿರಾರು ವರ್ಷಗಳಿಂದ ಮೀಸಲಾತಿ ಜಾರಿಯಲ್ಲಿತ್ತು. ನಿರ್ದಿಷ್ಟ ಜಾತಿಗಳು ನಿರ್ದಿಷ್ಟ ವೃತ್ತಿಯಲ್ಲೇ ತೊಡಗಬೇಕು ಎಂದು ಮನುವಾದದ ಕಟ್ಟಳೆ ಇತ್ತು. ಈ ಕಟ್ಟಳೆಗೆ ಕರ್ಮ ಸಿದ್ಧಾಂತವನ್ನು ಜೋಡಿಸಲಾಗಿತ್ತು.

ಇತ್ತೀಚಿನ ದಶಕಗಳಲ್ಲಿ ಈ ಜಾತಿ ಮೀಸಲಾತಿ ತೊಲಗಿ, ಖಾಸಗಿ ವಲಯದ ಹುದ್ದೆಗಳು ಎಲ್ಲರಿಗೂ ಮುಕ್ತವಾಗಿದ್ದವು. ಸಮಾಜವಾದಿ ಹೆಗ್ಗಳಿಕೆಯ ಸರ್ಕಾರ ಈಗ ಮತ್ತೆ ಖಾಸಗಿಯಲ್ಲಿ ಮೀಸಲಾತಿ ಜಾರಿಗೆ ತರಲು ಹೊರಟಿದೆ. ಈ ಬಾರಿ ಜಾತಿ ಮುಂದಿಟ್ಟಿಲ್ಲ, ಕನ್ನಡಿಗರು ಅಥವಾ ಸ್ಥಳೀಯರು ಎಂಬ ಪದ ಮುಂದಿಡಲಾಗಿದೆ.

ಶತಮಾನದ ಹಿಂದೆ ಮೈಸೂರು ಸಂಸ್ಥಾನದಲ್ಲೂ ಮೊದಲು ಸ್ಥಳೀಯರಿಗೆ ಮೀಸಲಾತಿ ನೀಡಲಾಗಿತ್ತು. ನಂತರ ಹಿಂದುಳಿದ ವರ್ಗಗಳ ಮೀಸಲಾತಿ ಬೇಕೆಂಬ ಬೇಡಿಕೆ ಜಾರಿಯಾಗಿತ್ತು. ಈ ಬಾರಿಯೂ, ಕನ್ನಡಿಗ/ಸ್ಥಳೀಯರಿಗೆ ಮೀಸಲಾತಿ ಜಾರಿಗೆ ಬಂದರೆ, ಮುಂಬರುವ ದಿನಗಳಲ್ಲಿ 'ಅಹಿಂದ' ಮೀಸಲಾತಿ ಬೇಡಿಕೆ ಖಂಡಿತಾ ಬಂದೇ ಬರಲಿದೆ.

ಸಮಾಜವಾದಿ ಸಿದ್ಧಾಂತ ಹಾಗೂ ಸರ್ಕಾರೀಕರಣದ ಮೂಲಕ ಭವ್ಯ ಭಾರತವನ್ನು ಕಟ್ಟುತ್ತೇವೆ ಎಂದು ಸ್ವಾತಂತ್ರ್ಯ ದೊರೆತ ಆರಂಭದ ದಶಕಗಳಲ್ಲಿ ಹೇಳಲಾಗಿತ್ತು. ಆದರೆ, ಭಾರತ ಭವ್ಯವಾಗುವ ಬದಲು ಬಡವಾಗಿಯೇ ಉಳಿದಿತ್ತು.

1991ರಲ್ಲಿ ಪಿ.ವಿ. ನರಸಿಂಹ ರಾವ್ ಎಂಬ ಮಹಾನುಭಾವ ಭಾರತದಲ್ಲಿ ಮುಕ್ತ ಆರ್ಥಿಕ ವ್ಯವಸ್ಥೆ ಜಾರಿಗೆ ತಂದಿದ್ದರು. ನಂತರ ದೇಶದ ಜನತೆ ಖಾಸಗಿ ವಲಯದ ಮೂಲಕ ತಮ್ಮ ತಾಕತ್ತು ಪ್ರದರ್ಶಿಸಿ ಭಾರತವನ್ನು ವಿಶ್ವದ ಮುಂಚೂಣಿ ದೇಶಗಳ ಸಾಲಿಗೆ ತಂದಿದ್ದಾರೆ.

ಖಾಸಗಿ ವಲಯದ ನಾಗಾಲೋಟಕ್ಕೆ ಕಡಿವಾಣ ಹಾಕಿ ಮತ್ತೆ ಸಮಾಜವಾದ ಜಾರಿಗೆ ತರಬೇಕು ಎಂದು ಕೆಲವರು ಆಗಾಗ ಆಲಾಪನೆ ಮಾಡುತ್ತಿರುತ್ತಾರೆ. ಬಹುಶಃ ಖಾಸಗಿ ವಲಯದಲ್ಲಿ ಮೀಸಲಾತಿ ಜಾರಿಗೆ ತಂದರೆ ಅದಕ್ಕಿಂತ ದೊಡ್ಡ ಕಡಿವಾಣ ಬೇರೊಂದಿಲ್ಲ.

ಮೀಸಲಾತಿ ತಪ್ಪಲ್ಲ. ಆದರೆ, ಅದನ್ನು ಜಾರಿಗೆ ತರುವ ವಿಧಾನದಲ್ಲಿ ಮಾತ್ರ ಸಿಕ್ಕಾಪಟ್ಟೆ ಲೋಪಗಳಿವೆ. ಉದಾಹರಣೆಗೆ : ಮೇಲ್ಜಾತಿ ಹಾಗೂ ಮೇಲ್ವರ್ಗದವರಿಗೆ ಮೀಸಲಾತಿ ಅಗತ್ಯವೇನಿದೆ? ಆದರೆ, 371ಜೆ ಮೂಲಕ ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಮೇಲ್ಜಾತಿ ಹಾಗೂ ಮೇಲ್ವರ್ಗದವರಿಗೂ ಮೀಸಲಾತಿ ಸಿಗುತ್ತಿದೆ! ಮಹಿಳಾ ಮೀಸಲಾತಿ ಹೆಸರಿನಲ್ಲಿ ಮೇಲ್ವರ್ಗ ಹಾಗೂ ಮೇಲ್ಜಾತಿಯವರಿಗೆ ಮೀಸಲಾತಿ ನೀಡಲಾಗುತ್ತಿದೆ.

ಇಷ್ಟು ಸಾಲದು ಎಂಬಂತೆ, ಮೀಸಲಾತಿಯಲ್ಲಿ ಒಳ ವರ್ಗಗಳನ್ನು ರೂಪಿಸಲಾಗಿದೆ. ನಾವು ಆ ವರ್ಗಕ್ಕೆ ಹೋಗೋಣ, ಈ ವರ್ಗಕ್ಕೆ ಹೋಗೋಣ ಎಂದು ಹೋರಾಟಗಳು ನಡೆಯುತ್ತಿವೆ. ಖಾಸಗಿ ವಲಯದಲ್ಲಿಯೂ ಜಾತಿ ಮೀಸಲಾತಿ ಕಲ್ಪಿಸಬೇಕು ಎಂಬ ಬೇಡಿಕೆ ಇದ್ದೇ ಇದೆ. ಒಂದು ವೇಳೆ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಮೀಸಲಾತಿ ಜಾರಿಗೆ ಬಂದರೆ, ಜಾತಿ ಮೀಸಲಾತಿ ಬೇಡಿಕೆಗೆ ಪೂರ್ಣ ಬಲ ಸಿಕ್ಕೇ ಸಿಗುತ್ತದೆ. ಆಗಂತೂ ಪರಿಸ್ಥಿತಿ ಇನ್ನಷ್ಟು ಹದಗೆಡುವುದರಲ್ಲಿ ಸಂಶಯವಿಲ್ಲ.

ಸರ್ಕಾರಿ ಮೀಸಲಾತಿ ಕುರಿತ ಕಾನೂನು ಹೋರಾಟಗಳು ನಿತ್ಯ ನಡೆಯುತ್ತಿವೆ. ಮುಂದೆ, ಖಾಸಗಿ ವಲಯವೂ ಮೀಸಲಾತಿಯಿಂದಾಗಿ ಕಾನೂನು ತೊಡಕಿನಲ್ಲಿ ಸಿಲುಕಿಕೊಳ್ಳಲಿದೆ. ಸರ್ಕಾರಿ ಕಚೇರಿಗಳಿಗೆ ಅಲೆಯುವ ಹಾಗೂ ಕೋರ್ಟುಗಳ ಕೇಸುಗಳಲ್ಲಿ ಸಿಲುಕುವ ಸಮಸ್ಯೆ ಎದುರಿಸಲು ಖಾಸಗಿ ವಲಯ ಸಿದ್ಧವಾಗಿದೆಯೇ?

ಮೀಸಲಾತಿಗೆ ಸಂಬಂಧಿಸಿದ ಹಲವಾರು ಪ್ರಕರಣಗಳು ಈಗಾಗಲೇ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿವೆ. ಪ್ರತಿ ಬಾರಿ ಚುನಾವಣೆ ಬಂದಾಗಲೂ ರಾಜಕೀಯ ಪಕ್ಷಗಳು ಮೀಸಲಾತಿ ಸ್ವರೂಪ ಬದಲಿಸಲು ಹಾತೊರೆಯುತ್ತಿರುತ್ತವೆ. ಇದೆಲ್ಲವನ್ನೂ ಖಾಸಗಿ ವಲಯದ ಮೇಲೆ ಹೇರಿದರೆ ಅದರ ಗತಿ ಏನಾಗಬೇಕು?

ಸರ್ಕಾರ ಬೃಹತ್ ಸಂಸ್ಥೆಯಾಗಿರುವ ಕಾರಣ, ಮೀಸಲಾತಿಯ ಎಲ್ಲ ತೊಡಕುಗಳನ್ನು ಎದುರಿಸಬಹುದು. ಅಲ್ಲದೇ ಸರ್ಕಾರಿ ಹುದ್ದೆಗೆ ಸೇರಿದವರಲ್ಲಿ ಬಹುತೇಕರು ನಿವೃತ್ತಿಯವರೆಗೂ ಅಲ್ಲೇ ಇರುತ್ತಾರೆ. ಖಾಸಗಿ ವಲಯ ಹಾಗಲ್ಲ. ನಿರಂತರವಾಗಿ ಉದ್ಯೋಗಿಗಳು ಬದಲಾಗುತ್ತಾರೆ. ಹೀಗಾಗಿ ಖಾಸಗಿ ವಲಯದಲ್ಲಿ ಮೀಸಲಾತಿ ಪರಿಣಾಮ ಸರ್ಕಾರಿ ವಲಯಕ್ಕಿಂತ ತೀವ್ರವಾಗಿರಲಿದೆ.

ಎಲ್ಲಕ್ಕೂ ಮುಖ್ಯ ಎಂದರೆ, ಮೀಸಲಾತಿಯ ಬಗ್ಗೆ ಸಮರ್ಪಕ ಚರ್ಚೆಯಾಗಬೇಕಿದೆ. ವೋಟ್ ಬ್ಯಾಂಕ್ ಚಡಪಡಿಕೆಯ ರಾಜಕೀಯ ಪಕ್ಷಗಳು ಮೀಸಲಾತಿ ಬಗ್ಗೆ ಸದನದಲ್ಲಿ ಸಮರ್ಪಕ ಚರ್ಚೆ ನಡೆಸುವುದು ಅನುಮಾನ. ಸಂಪುಟದಲ್ಲಿ ಸಮರ್ಪಕ ಚರ್ಚೆ ನಡೆಸದೇ ಖಾಸಗಿ ವಲಯದ ಮೀಸಲಾತಿ ಬಗ್ಗೆ ಪ್ರಕಟಿಸಿದ್ದು ಇದಕ್ಕೆ ಸಾಕ್ಷಿಯಾಗಿದೆ.

ಉದ್ಯಮಗಳನ್ನು ಬೆಳೆಸಲು ಹಾಗೂ ಉದ್ಯೋಗ ಸೃಷ್ಟಿಸಲು ಸರ್ಕಾರ ಮೂಲಭೂತ ಸೌಲಭ್ಯಗಳಿಗೆ ಆದ್ಯತೆ ನೀಡಬೇಕಿದೆ. ಕುಡಿಯುವ ನೀರಿನ ಕನಿಷ್ಠ ಅಗತ್ಯಕ್ಕಾಗಿ ಬೆಂಗಳೂರು ಕಳೆದ ಬೇಸಿಗೆಯಲ್ಲಿ ಚಡಪಡಿಸಿತ್ತು. ಸಾರಿಗೆ ಸೌಲಭ್ಯ, ವಸತಿ, ಆರೋಗ್ಯ ಮುಂತಾದ ಸೌಲಭ್ಯಗಳನ್ನು ಒದಗಿಸಿ, ಜನರಿಗೆ ಕೌಶಲ್ಯ ಕಲಿಸಿದರೆ ಉದ್ಯೋಗಾವಕಾಶ ತಾನಾಗಿಯೇ ಸೃಷ್ಟಿಯಾಗುತ್ತದೆ. ಇದೆಲ್ಲದರ ಕಡೆ ಯೋಚಿಸಲು ರಾಜಕೀಯ ಪಟ್ಟಭದ್ರರಿಗೆ ಪುರುಸೊತ್ತಿದೆಯೇ?

- ಬಿ.ಜಿ. ಪ್ರವೀಣ್ ಕುಮಾರ್, ದಾವಣಗೆರೆ

### ಬಹುರೂಪಿ, ಸರ್ವವ್ಯಾಪಿ ಮೀಸಲಾತಿ



ಮೀಸಲಾತಿ ಕೇವಲ ಭಾರತಕ್ಕೆ ಸೀಮಿತವಲ್ಲ. ಅಮೆರಿಕದಿಂದ ಹಿಡಿದು ಪಕ್ಕದ ಬಾಂಗ್ಲಾದೇಶದವರೆಗೆ ಮೀಸಲಾತಿ ಸರ್ವವ್ಯಾಪಿಯಾಗಿದೆ.

ಅಮೆರಿಕದಲ್ಲಿ ಡಿ.ಇ.ಐ. (ವಿಭಿನ್ನತೆ, ಸಮಪಾಲು ಹಾಗೂ ಒಳಗೊಳ್ಳುವಿಕೆ) ಆಧಾರದ ಮೇಲೆ ಖಾಸಗಿ ವಲಯದಲ್ಲಿ ಮೀಸಲಾತಿ ಕಲ್ಪಿಸಲಾಗುತ್ತಿದೆ. ಇತ್ತೀಚೆಗಂತೂ ಅಮೆರಿಕದ ಶಿಕ್ಷಣ, ಟೆಕ್, ಮಾಧ್ಯಮ ಸೇರಿದಂತೆ ಎಲ್ಲ ವಲಯಗಳಲ್ಲಿ ಡಿ.ಇ.ಐ. ಪರಿಣಿತರನ್ನು ನೇಮಿಸಿಕೊಳ್ಳಲಾಗಿದೆ. ಇವರು ನೇಮಕ ಹಾಗೂ ಬಡ್ತಿಯಲ್ಲಿ ಮೀಸಲಾತಿ ಜಾರಿಗೆ ತರುವುದಕ್ಕೆ ನೆರವಾಗುತ್ತಾರೆ.

ದಕ್ಷಿಣ ಆಫ್ರಿಕಾದ ಕ್ರಿಕೆಟ್ ತಂಡದಲ್ಲೂ ಮೀಸಲಾತಿ ಇದೆ. ಕನಿಷ್ಠ 6 ಸ್ಥಾನಗಳನ್ನು ಬಿಳಿಯರಲ್ಲದವರಿಗೆ ಮೀಸಲಿಡಲಾಗಿದೆ.

ಬಾಂಗ್ಲಾದೇಶದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರ ಕುಟುಂಬದವರಿಗೆ ಮೀಸಲಾತಿ ಇದೆ. ಈ ಮೀಸಲಾತಿ ರದ್ದುಗೊಳಿಸಲು ಅಲ್ಲಿ ಹಿಂಸಾತ್ಮಕ ಹೋರಾಟ ನಡೆಯುತ್ತಿರುವುದು ಇತ್ತೀಚಿನ ವಿದ್ಯಮಾನ.

## 2041ರಲ್ಲಿ ಅಸ್ಸಾಂನಲ್ಲಿ ಮುಸ್ಲಿಮರು ಬಹುಸಂಖ್ಯಾತರು : ಶರ್ಮ

ಗುವಾಹತಿ, ಜು. 19 - ರಾಜ್ಯದಲ್ಲಿ ಮುಸ್ಲಿಮರ ಜನಸಂಖ್ಯೆ ಪ್ರತಿ ಹತ್ತು ವರ್ಷಕ್ಕೆ ಶೇಕಡ 30ರಷ್ಟು ಹೆಚ್ಚಾಗುತ್ತಿದೆ ಹಾಗೂ 2041ರ ವೇಳೆಗೆ ಮುಸ್ಲಿಮರು ರಾಜ್ಯದಲ್ಲಿ ಬಹುಸಂಖ್ಯಾತರಾಗಲಿದ್ದಾರೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಹೇಳಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾದರಿ ಅಂಕಿ-ಅಂಶಗಳ ಪ್ರಕಾರ ರಾಜ್ಯದಲ್ಲಿ ಈಗ ಶೇಕಡ 40 ರಷ್ಟು ಮುಸ್ಲಿಮರಿದ್ದಾರೆ. 2041ರ ವೇಳೆಗೆ ಅವರು ಬಹುಸಂಖ್ಯಾತರಾಗಲಿದ್ದಾರೆ. ಇದು ವಾಸ್ತವವಾಗಿದೆ, ಯಾರು ತಡೆಯಲಾಗದು ಎಂದೂ ಅವರು ಹೇಳಿದ್ದಾರೆ.

## ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿಗೆ ರೈತ ಮತ್ತು ರೈತ ಮಹಿಳೆಯರಿಂದ ಅರ್ಜಿ

ದಾವಣಗೆರೆ, ಜು.19- 2024-25ನೇ ಸಾಲಿನಲ್ಲಿ ಭಾಗವಹಿಸುತ್ತಿರುವ ರೈತರು ಕೃಷಿಯಲ್ಲಿ ಸಮಗ್ರ ಕೃಷಿ ಪದ್ದತಿ , ಬೆಳೆ ಪದ್ದತಿಗಳು ಮತ್ತು ಬೆಳೆ ವೈವಿಧ್ಯೀಕರಣ, ಸಾವಯವ ಕೃಷಿ, ಕೃಷಿ ಯಂತ್ರೋಪಕರಣ ಅಭಿವೃದ್ಧಿ ನೀರಿನ ಸಾಮರ್ಥ ಬಳಕೆ ಇನ್ನಿತರೆ ಯಾವುದಾದರು ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಜಿಲ್ಲೆಯ ಆಸಕ್ತ ರೈತರಿಂದ ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿಗೆ ರೈತ ಮತ್ತು ರೈತ ಮಹಿಳೆಯರಿಂದ ಪ್ರತ್ಯೇಕವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆತ್ಮ ಯೋಜನೆಯಡಿ ಕೃಷಿಯಲ್ಲಿ ಸಮಗ್ರ ಬೆಳೆ ಪದ್ದತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ, ವೈಜ್ಞಾನಿಕ ಯಂತ್ರೋಪಕರಣಗಳ ಬಳಕೆ, ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ ಬೇಸಾಯ, ಹೈಟೆಕ್ ಹಸಿರುಮನೆ ಅಳವಡಿಕೆ, ಕೃಷಿ ಸಂಸ್ಕರಣೆ, ಅರಣ್ಯ ಕೃಷಿ, ಆಡು, ಕುರಿ, ಮೊಲ ಇತ್ಯಾದಿ ಸಾಕಾಣಿಕೆ ಚಟುವಟಿಕೆಗಳ ಬಗ್ಗೆ ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದ ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಆಗಸ್ಟ್ 5 ಕೊನೆ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಜಿಲ್ಲೆಯ ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು, ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

## ಮಾನಸಿಕ ಅಸ್ವಸ್ಥರನ್ನು ಮುಖ್ಯವಾಹಿನಿಗೆ ತರುವಲ್ಲಿ 'ಆಶಾ' ಪಾತ್ರ ಮುಖ್ಯ : ಡಾ.ದೇವರಾಜ್



ದಾವಣಗೆರೆ, ಜು. 19- ಒತ್ತಡ ಮುಕ್ತ ಜೀವನವನ್ನು ನಡೆಸುವ ಮಾರ್ಗೋಪಾಯಗಳನ್ನು ತಿಳಿದುಕೊಂಡು ಮುನ್ನಡೆದರೆ ಮಾತ್ರ ಪ್ರತಿಯೊಬ್ಬರೂ ಮಾನಸಿಕ ಆರೋಗ್ಯವಂತರಾಗಿರಲು ಸಾಧ್ಯ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ದೇವರಾಜ್ ಪಟಗೆ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ವತಿಯಿಂದ ನಗರದ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ನಗರ ಪ್ರದೇಶದ ಆಶಾ ಕಾರ್ಯಕರ್ತೆಯರಿಗೆ ಮಾನಸಿಕ ಆರೋಗ್ಯದ ಕುರಿತ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯಾರಲ್ಲಿ ಮಾನಸಿಕ ಕಿರಿಕಿರಿ, ನಿವೇದನೆ, ಚಿಂತೆ, ವ್ಯಥೆ, ನಕಾರಾತ್ಮಕ ಆಲೋಚನೆ ಇರುತ್ತದೆಯೋ ಅಂಥವರು ಮಾನಸಿಕ ಆರೋಗ್ಯ ಸಹಾಯವಾಣಿ 14416ಕ್ಕೆ ಕರೆ ಮಾಡಿ ಆಪ್ತ ಸಮಾಲೋಚನೆ ಪಡೆಯಬಹುದಾಗಿದೆ ಹಾಗೂ ಪ್ರತಿಯೊಂದು ಸರ್ವೇಯಲ್ಲಿ ಮಾನಸಿಕ ಅಸ್ವಸ್ಥರನ್ನು ಗುರುತಿಸುವ ಕೆಲಸವಾಗಲಿ ಮತ್ತು ಮಾನಸಿಕ ಅಸ್ವಸ್ಥರನ್ನು ಮುಖ್ಯವಾಹಿನಿಗೆ ತರುವಲ್ಲಿ ಆಶಾಕಾರ್ಯ ಕರ್ತೆಯರ ಪಾತ್ರ ಮುಖ್ಯ ಎಂದರು.

ಮಾನಸಿಕ ಕಾಯಿಲೆಯೂ ಮೆದುಳಿನಲ್ಲಾಗುವ ರಾಸಾಯನಿಕ ಬದಲಾವಣೆ, ಅನುವಂಶೀಯತೆ, ಒತ್ತಡದಿಂದ ಬರುವಂತಹದ್ದಾಗಿದೆ. ಯಾವುದೇ ದೆವ್ವ-ಭೂತ, ಮಾಟ- ಮಂತ್ರ, ಪೂರ್ವಜನ್ಮದ ಪಾಪದಿಂದ ಬರುವಂತದ್ದಲ್ಲ, ಈ ರೀತಿಯ ಮೂಢನಂಬಿಕೆಗೆ ಒಳಗಾಗಿ ಯಾವುದೇ ತರಹದ ಅಹಿತಕರ ಘಟನೆಗಳನ್ನು ಮಾಡಿಕೊಳ್ಳದಿರಲು ಜನಸಾಮಾನ್ಯರಿಗೆ ತಿಳಿಸಿ ಎಂದು ಆಶಾ ಕಾರ್ಯಕರ್ತೆಯರಿಗೆ ತಿಳಿಸಿದರು.

ಹಿರಿಯ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಉಮಾಪತಿ, ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕ ರವಿಕುಮಾರ್, ಆಶಾ ಮೇಲ್ವಿಚಾರಕರಾದ ಸುರೇಖಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೋಷಿಯಲ್ ವರ್ಕರ್ ಎಂ.ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

## ಹರಿಹರದಲ್ಲಿ ಇಂದು ಬಿಸಿಯೂಟ ತಯಾರಕರ ಜಿಲ್ಲಾ ಸಮ್ಮೇಳನ

ಎಐಟಿಯುಸಿ ಸಂಯೋಜಿತ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಜಿಲ್ಲಾ ಸಮ್ಮೇಳನವು ಹನಗವಾಡಿ ಬೈಪಾಸ್ ಹತ್ತಿರದ ಬಿ. ಕಷ್ಣಪ್ಪ ಭವನದಲ್ಲಿ ಇಂದು ಸಂಜೆ 4 ಕ್ಕೆ ನಡೆಯವುದು ಎಂದು ಬಿಸಿ ಊಟ ತಯಾರಕರ ಜಿಲ್ಲಾಧ್ಯಕ್ಷ ಆವರಗೆರೆ ಚಂದ್ರು ತಿಳಿಸಿದ್ದಾರೆ.

## ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಜಿ

ದಾವಣಗೆರೆ, ಜು. 19 ಭಾರತ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು ಸಹಾಯಕ ಸೆಕ್ಷನ್ ಆಫೀಸರ್, ಲೆಕ್ಕ ಪರಿಶೋಧನಾ ಅಧಿಕಾರಿ, ಲೆಕ್ಕ ಪತ್ರ ಅಧಿಕಾರಿ, ಆದಾಯ ತೆರಿಗೆ, ಕೇಂದ್ರ ಅಬಕಾರಿ ಮತ್ತು ಸಿಬಿಐಯಲ್ಲಿ ಇನ್‌ಸ್ಪೆಕ್ಟರ್, ಇಡಿ ನಲ್ಲಿ ಎಇಓ ಮತ್ತು ಸಿಬಿಐ, ಸಿಬಿಎನ್‌ನಲ್ಲಿ ಸಬ್‌ಇನ್‌ಸ್ಪೆಕ್ಟರ್, ಅಂಚೆ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್, ಹಿರಿಯ ಸೆಕ್ರೆಟರಿಯೇಟ್ ಸಹಾಯಕ, ಅಪ್ಪರ್ ಡಿವಿಜನ್ ಗುಮಾಸ್ತ, ಅಂಚೆ ಇಲಾಖೆ ಸಹಾಯಕ, ವಿಂಗಡನೆ ಸಹಾಯಕ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹುದ್ದೆಗಳಿಗೆ ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ https://ssc.gov.in or www.ssckkr.kar.nic.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 24 ಕೊನೆಯ ದಿನವಾಗಿರುತ್ತದೆ.

ವಿವರಕ್ಕೆ ಸಹಾಯವಾಣಿ – 080-25502520 ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ದಾವಣಗೆರೆ. ದೂರವಾಣಿ ಸಂಖ್ಯೆ : 08192259446 ಇಲ್ಲಿಗೆ ಸಂಪರ್ಕಿಸುವಂತೆ ಉದ್ಯೋಗಾಧಿಕಾರಿ ಡಿ. ರವೀಂದ್ರ ತಿಳಿಸಿದ್ದಾರೆ.

## ಸಾಲ ಸೌಲಭ್ಯಕ್ಕಾಗಿ ಅರ್ಜಿ

ದಾವಣಗೆರೆ, ಜು.19- ರಾಜ್ಯ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಈ ವೆಬ್‌ಸೈಟ್ ಮೂಲಕ kacdc.karnataka.gov.in ಅರ್ಜಿ ಸಲ್ಲಿಸ ಬಹುದಾಗಿದ್ದು, ಆಗಸ್ಟ್ 31 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ. ಮಾಹಿತಿಗಾಗಿ 08192230934 ಸಂಪರ್ಕಿಸಿ.

## ಐಎಎಸ್ ಅಧಿಕಾರಿ ಖೇಡ್ಕರ್ ವಿರುದ್ಧ ಆಯೋಗದ ದೂರು

ನವದೆಹಲಿ, ಜು. 19 - ಪ್ರೊಬೇಷನರಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರು ನಾಗರಿಕ ಸೇವಾ ಪರೀಕ್ಷೆಯಲ್ಲಿ ಅಕ್ರಮ ನಡೆಸಿರುವ ಆರೋಪದ ಮೇಲೆ ಕೇಂದ್ರ ಲೋಕಸೇವಾ ಆಯೋಗ ಪೊಲೀಸರಲ್ಲಿ ದೂರು ದಾಖಲಿಸಿದೆ.

ಅವರು ಪರೀಕ್ಷೆಯಲ್ಲಿ ಆಯ್ಕೆಯಾಗಿರುವುದನ್ನು ರದ್ದುಗೊಳಿಸಲು ಹಾಗೂ ಮುಂದಿನ ಪರೀಕ್ಷೆಗಳಿಗೆ ಹಾಜರಾಗದಂತೆ ಡಿಬಾರ್ ಮಾಡಲು ನೋಟಿಸ್ ಸಹ ಕಳಿಸಲಾಗಿದೆ. ಪ್ರೊಬೇಷನರಿ ಅಧಿಕಾರಿಯಾಗಿರುವ ಖೇಡ್ಕರ್, ಮಹಾರಾಷ್ಟ್ರದಲ್ಲಿ ಕಾರ್ಯನಿರ್ವಹಿಸುವಾಗ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಲಾಗಿತ್ತು.

ಅವರ ವಿರುದ್ಧ ತನಿಖೆ ನಡೆಸಿದಾಗ ಅವರು ಅನುಮತಿಗಿಂತ ಹೆಚ್ಚು ಪ್ರಯತ್ನಗಳಲ್ಲಿ ಪರೀಕ್ಷೆ ಬರೆದಿರುವುದು ಹಾಗೂ ಹೆಸರು ಬದಲಿಸಿಕೊಂಡು ಪರೀಕ್ಷೆಗೆ ಹಾಜರಾಗಿದ್ದು ಕಂಡು ಬಂದಿತ್ತು. ತಮ್ಮ ತಂದೆ - ತಾಯಿಗಳ ಸಹಿ, ಇಮೇಲ್ ಐಡಿ, ಮೊಬೈಲ್ ಸಂಖ್ಯೆ ಹಾಗೂ ವಿಳಾಸ ತಪ್ಪಾಗಿ ಹೇಳಿರುವುದು ಕಂಡುಬಂದಿತ್ತು. ಈ ಹಿನ್ನೆಲೆಯಲ್ಲಿ ಲೋಕಸೇವಾ ಆಯೋಗ ಖೇಡ್ಕರ್ ವಿರುದ್ಧ ಪ್ರಕರಣ ದಾಖಲಿಸುವುದು ಸೇರಿದಂತೆ ಸರಣಿ ಕ್ರಮಗಳಿಗೆ ಮುಂದಾಗಿದೆ. 2022 ರಲ್ಲಿ ಅವರು ಒಬಿಸಿ ವರ್ಗದಲ್ಲಿ ಹಲವು ಅಂಗವೈಕಲ್ಯ ಹೊಂದಿರುವ ವ್ಯಕ್ತಿಯಾಗಿ 821 ನೇ ರ್‍ಯಾಂಕ್ ಪಡೆದಿದ್ದರು.



## ಮಳೆ : ಮಲೇಬೆನ್ನೂರಿನ ಭಾಗದಲ್ಲಿ 6 ಮನೆಗಳಿಗೆ ಭಾಗಶಃ ಹಾನಿ

ಮಲೇಬೆನ್ನೂರು, ಜು.19- ಕಳೆದ 3 ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಮಲೇಬೆನ್ನೂರು ಹೋಬಳಿಯಲ್ಲಿ 6 ಮನೆಗಳಿಗೆ ಭಾಗಶಃ ಹಾನಿ ಆಗಿದೆ ಎಂದು ಉಪ ತಹಶೀಲ್ದಾರ್ ಆರ್. ರವಿ ತಿಳಿಸಿದ್ದಾರೆ.

ಪಟ್ಟಣದ 18ನೇ ವಾರ್ಡ್‌ನಲ್ಲಿ ಮೆಹಬೂಬಿ ಭಕ್ಷಿಸಾಬ್ ಅವರ ವಾಸದ ಮನೆ ಶುಕ್ರವಾರ ಬೆಳಗಿನಜಾವ ಕುಸಿದು ಬಿದ್ದಿದೆ. ಈ ಘಟನೆಯಲ್ಲಿ ಯಾವುದೇ ಪ್ರಾಣ ಹಾನಿ ಆಗಿಲ್ಲ ಎಂದು ಸ್ಥಳಕ್ಕೆ ಉಪ ತಹಶೀಲ್ದಾರ್ ಆರ್. ರವಿ, ವಾರ್ಡಿನ ಪುರಸಭೆ ಸದಸ್ಯ ಬಿ.ಮಂಜುನಾಥ್ ಅವರು ನೀಡಿ ವೀಕ್ಷಣೆ ಮಾಡಿದರು. ಗೋವಿನಹಾಳ್ ಗ್ರಾಮದಲ್ಲಿ 2 ಮನೆ ಮತ್ತು ಹರಳಹಳ್ಳಿ, ಎಳೆಹೊಳೆ, ಬೂದಿಹಾಳ್ ಗ್ರಾಮಗಳಲ್ಲಿ ತಲಾ ಒಂದೊಂದು ಮನೆಗಳಿಗೆ ಭಾಗಶಃ ಹಾನಿ ಆಗಿದೆ ಎಂದು ವರದಿಯಾಗಿದೆ.

**ಮಳೆ ಪ್ರಮಾಣ :** ಗುರುವಾರ ಬೆಳಗ್ಗೆಯಿಂದ ಶುಕ್ರವಾರ ಬೆಳಗ್ಗೆ 6 ರವರೆಗೆ ಹರಿಹರ ತಾ.ನಲ್ಲಿ ಒಟ್ಟು 50 ಮೀ ಮೀ ಮಳೆಯಾಗಿದ್ದು, ಮಲೇಬೆನ್ನೂರಿನಲ್ಲಿ 22 ಮೀ ಮೀ ಮತ್ತು ಹೊಳೆ ಸಿರಿಗೆರೆಯಲ್ಲಿ 17 ಮೀ ಮೀ, ಕೊಂಡಜ್ಜಿಯಲ್ಲಿ 4 ಮೀ ಮೀ, ಹರಿಹರದಲ್ಲಿ 8 ಮೀ ಮೀ ಮಳೆ ಸುರಿದಿದೆ.

## ಎಸ್‌ಎಸ್‌ಎನ್‌ಪಿ ಶಾಲೆಯಲ್ಲಿ ಸಂಸ್ಥಾಪಕರ ದಿನ



ದಾವಣಗೆರೆ, ಜೂ. 19- ಬಾಪೂಜಿ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಡಾ. ಶಾಮನೂರು ಶಿವಶಂಕರಪ್ಪನವರ 94ನೇ ಹುಟ್ಟುಹಬ್ಬದ ಪ್ರಯುಕ್ತ ಡಾ. ಎಸ್‌ಎಸ್‌ಎನ್‌ಪಿ ಶಾಲೆಯಲ್ಲಿ ಫೌಂಡರ್ಸ್‌ಡೇ ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಬಾಪೂಜಿ ವಿದ್ಯಾಸಂಸ್ಥೆಯ ಡೀನ್ ಮಂಜುನಾಥ ರಂಗರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶಿಕ್ಷಕರಾದ ರವೀಂದ್ರ ಅರಳುಗುಪ್ಪಿ ಅವರು ಶಾಮನೂರು ಶಿವಶಂಕರಪ್ಪ ಅವರನ್ನೇ ಹೋಲುವ ವೇಷಭೂಷಣ ಧರಿಸಿದ್ದು ವಿಶೇಷವಾಗಿತ್ತು. ಅವರಿಗೆ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ವರದಿಗಾರರು ಕೇಳಿದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಕೊಡುತ್ತಾ, ಸಭಿಕರೆಲ್ಲರೂ ಆಶ್ಚರ್ಯಚಕಿತರಾಗುವಂತೆ ಮಾಡಿದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಡೀನ್ ಮಂಜುನಾಥ ರಂಗರಾಜು ಅವರು ಎಸ್ಸೆಸ್ ಅವರ ಕುರಿತು ಮಾತನಾಡುತ್ತಾ, ಇಂದು ದಾವಣಗೆರೆ ಇಷ್ಟೊಂದು ಅಭಿವೃದ್ಧಿ ಕಾಣಬೇಕಾದರೆ ಎಸ್ಸೆಸ್ ಕೊಡುಗೆ ಅಪಾರವಾಗಿದೆ. ಇವರು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ವೈದ್ಯಕೀಯ, ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಅಪಾರವಾದ ಅಭಿವೃದ್ಧಿ ಮಾಡಿದ್ದರಿಂದ ಇಂದು ದಾವಣಗೆರೆಯ ಅತ್ಯುನ್ನತ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಡಾ. ಎಸ್‌ಎಸ್‌ಎನ್‌ಪಿ ಉಪಪ್ರಾಂಶುಪಾಲ ರಮೇಶ್ ಬಾಬು, ಶಾಲಾ ಸಂಯೋಜಕರಾದ ಶ್ರೀಮತಿ ರುತಿಕಾ ಮತ್ತು ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸಂಪೂರ್ಣ ಉಸ್ತುವಾರಿಯನ್ನು ಪ್ರಾಂಶುಪಾಲರಾದ ಶ್ರೀಮತಿ ಕಮಲ ಬಿ. ನಾರಾಯಣ ವಹಿಸಿಕೊಂಡಿದ್ದರು.

## ನಗರದಾದ್ಯಂತ ಅಲಂಕಾರಿಕ ಗಿಡ ನೆಡುವ ಗೋ ಗ್ರೀನ್



ರಾಣೇಬೆನ್ನೂರು

ರಾಣೇಬೆನ್ನೂರು, ಜು. 19 - ಇಲ್ಲಿನ ವರ್ತಕರ ಸಂಘ, ಇನ್ನರ್ ವ್ಹೀಲ್ ಹಾಗೂ ಗೋಗ್ರೀನ್ ಸಂಸ್ಥೆ ಸೇರಿ ನಗರ ಸೌಂದರ್ಯ ಹೆಚ್ಚಿಸಲು 5 ನೂರು ವಿವಿಧ ಬಣ್ಣಗಳ ಹೂವು ಬಿಡುವ ಹಾಗೂ ಇತರೆ ಅಲಂಕಾರಿಕ ಗಿಡಗಳು ಸೇರಿದಂತೆ ಒಟ್ಟು 1 ಸಾವಿರ ಗಿಡಗಳನ್ನು ನೆಡುವ ಕಾರ್ಯಕ್ರಮ ಯೋಜಿಸಿದ್ದು, ಪ್ರಕಾಶಾನಂದ ಸ್ವಾಮಿಗಳು ಚಾಲನೆ ನೀಡಿದರು. ಸಂಜನ ಕುರವತ್ತಿ, ಸುಮಾ ಹೊಟ್ಟಿಗೌಡ್ರ, ಸುಮಾ ಉಪ್ಪಿನ, ಪ್ರತಿಭಾ ಜಂಬಗಿ, ಎಚ್.ಎನ್. ದೇವಕುಮಾರ, ಜಿ.ಜಿ. ಹೊಟ್ಟಿಗೌಡ್ರ, ಡಾ. ಬಸವರಾಜ ಕೇಲಗಾರ, ಡಾ. ಗಿರೀಶ ಕೆಂಚಪ್ಪನವರ, ವೀರೇಶ ಮೋಟಗಿ, ಬಸವಪ್ರಭು ಪಾಟೀಲ ಮತ್ತಿತರರಿದ್ದರು.



## ಮಾಗನೂರು ಬಸಪ್ಪ ಶಾಲೆಯಲ್ಲಿ ವಿದ್ಯುನ್ಮಾನ ಮತ ಯಂತ್ರದ ಮೂಲಕ ಚುನಾವಣೆ


ದಾವಣಗೆರೆ, ಜು. 19- ಮಾಗನೂರು ಬಸಪ್ಪ ಪಬ್ಲಿಕ್ ಸ್ಕೂಲ್‌ನಲ್ಲಿ ವಿದ್ಯುನ್ಮಾನ ಮತ ಯಂತ್ರದ ಮೂಲಕ ವಿದ್ಯಾರ್ಥಿ ಸಂಘದ ಚುನಾವಣೆ ನಡೆಸಲಾಯಿತು. ವಿದ್ಯಾರ್ಥಿ ಕಾರ್ಯದರ್ಶಿ, ಉಪ ಕಾರ್ಯದರ್ಶಿ, ಪ್ರವಾಸದ ಕಾರ್ಯದರ್ಶಿ, ಕ್ರೀಡಾ ಕಾರ್ಯದರ್ಶಿ, ಸಾಂಸ್ಕೃತಿಕ ಕಾರ್ಯದರ್ಶಿಗಳನ್ನು ವಿದ್ಯಾರ್ಥಿಗಳು ಮತದಾನ ಮಾಡುವ ಮೂಲಕ ಆಯ್ಕೆ ಮಾಡಿದರು.

ಇದೇ ವೇಳೆ ತರಗತಿ ಪ್ರತಿನಿಧಿಗಳನ್ನೂ ಸಹ ಮತದಾನದ ಮೂಲಕ ಆಯ್ಕೆ ಮಾಡಲಾಯಿತು. ಈ ವಿನೂತನ ಮಾದರಿ ಚುನಾವಣೆಯಲ್ಲಿ ಮಾಗನೂರು ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡರು, ಶಾಲಾ ಮುಖ್ಯಸ್ಥರಾದ ಎಸ್.ಆರ್. ಶಿರಗಂಬಿ, ಎ.ಎಸ್. ಕುಸುಮ, ಎಸ್. ಮಂಜುನಾಥ ಅವರುಗಳು ಮಕ್ಕಳಿಗೆ ಶುಭ ಕೋರಿ 'ನಿಮ್ಮ ಮತ ನಿಮ್ಮ ಅಮೂಲ್ಯ ಹಕ್ಕು' ಅದನ್ನು ಸಮರ್ಥವಾಗಿ ಬಳಸಿ ನಾಯಕರನ್ನು ಚುನಾಯಿಸಿ ಎಂದು ಕರೆ ನೀಡಿದರು.

## ಪದ್ಮ ಶ್ರೇಣಿಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜು.19- ಕಲೆ, ಸಾಹಿತ್ಯ, ಶಿಕ್ಷಣ, ಕ್ರೀಡೆ, ವೈದ್ಯಕೀಯ, ಸಮಾಜ ಸೇವೆ, ವಿಜ್ಞಾನ - ಇಂಜಿನಿಯರಿಂಗ್, ಸಾರ್ವಜನಿಕ ವ್ಯವಹಾರ, ನಾಗರಿಕ ಸೇವೆ, ವ್ಯಾಪಾರ, ಕೈಗಾರಿಕೆ ಮತ್ತು ಸಮಾಜದ ಯಾವುದೇ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ 2025ನೇ ಸಾಲಿನ ಪದ್ಮ ಶ್ರೇಣಿಯ ಪ್ರಶಸ್ತಿಗಳಾದ 'ಪದ್ಮ ವಿಭೂಷಣ, 'ಪದ್ಮ ಭೂಷಣ ಮತ್ತು 'ಪದ್ಮಶ್ರೀ' ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. padmaawards.gov.in ಈ ವೆಬ್‌ಸೈಟ್‌ನಲ್ಲಿ ಪ್ರಶಸ್ತಿಗೆ ಅನ್ವಯಿಸುವ ನಿಯಮಗಳಿವೆ. ಅರ್ಹರು ಈ ಇ-ಮೇಲ್ ವಿಳಾಸವಾದ uspolitical-dpar@karnataka.gov.in ಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಆಗಸ್ಟ್ 31 ಕೊನೆ ದಿನವಾಗಿದೆ. ಮಾಹಿತಿಗಾಗಿ 08192-237480 ಸಂಪರ್ಕಿಸಿ.

## ಜಯನಗರದ ಶ್ರೀ ಸಾಯಿ ಬಾಬಾ ಮಂದಿರದಲ್ಲಿ ಗುರುಪೂರ್ಣಿಮೆ



ದಾವಣಗೆರೆ ಜಯನಗರದಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ದೇವಸ್ಥಾನದ ಸೇವಾ ಟ್ರಸ್ಟ್ ವತಿಯಿಂದ ಗುರು ಪೂರ್ಣಿಮೆ ಪ್ರಯುಕ್ತ ಇಂದು - ನಾಳೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12ರವರೆಗೆ ಶ್ರೀ ಶಿರಡಿ ಸಾಯಿಬಾಬಾರವರ ಉತ್ಸವ ಮೂರ್ತಿಯ ಮೆರವಣಿಗೆಯನ್ನು ನಂದಿಕೋಲು, ಚಂಡಿ ಹಾಗೂ ನಾಸಿಕ್ ಡೋಲು ವಾದ್ಯಗಳ ಮೂಲಕ ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನದಿಂದ ಶ್ರೀ ಶಿರಡಿ ಸಾಯಿಬಾಬಾ ದೇವಸ್ಥಾನದವರೆಗೆ ಏರ್ಪಡಿಸಲಾಗಿದೆ. ಮಧ್ಯಾಹ್ನ 12.30 ರಿಂದ 1ರವರೆಗೆ ಮಹಾಮಂಗಳಾರತಿ ತದ ನಂತರ 3 ರವರೆಗೆ ಪ್ರಸಾದ ವಿನಿಯೋಗ ಇರುತ್ತದೆ.

ನಾಳೆ ಭಾನುವಾರ ಗುರು ಪೂರ್ಣಿಮೆಯ ಪ್ರಯುಕ್ತ ಮುಂಜಾನೆಯ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಸೂರ್ಯನಾರಾಯಣ ಸ್ವಾಮೀಜಿ ನೇತೃತ್ವದಲ್ಲಿ ಬೆಳಿಗ್ಗೆ 4.30 ರಿಂದ 9.30ರ ವರೆಗೆ ಗಣಹೋಮ ಹಾಗೂ ಗುರುಹೋಮ, ಶ್ರೀ ಸಾಯಿಬಾಬಾರವರ ಮೂರ್ತಿಗೆ ಹಾಲಿನ ಅಭಿಷೇಕ, ಬೆಳಿಗ್ಗೆ 9.30 ರಿಂದ 12ರವರೆಗೆ ಶ್ರೀ ಸಾಯಿ ಸತ್ಯನಾರಾಯಣ ಹಾಗೂ ನವಗ್ರಹ ಪೂಜೆ. ಮಧ್ಯಾಹ್ನ 12.30 ರಿಂದ 1 ರವರೆಗೆ ಶ್ರೀ ಸಾಯಿಬಾಬಾರವರ ಮಹಾ ಮಂಗಳಾರತಿ ಮಧ್ಯಾಹ್ನ 1.30 ರಿಂದ 4ರ ವರೆಗೆ ಮಹಾಪ್ರಸಾದ ವಿನಿಯೋಗ ಇರುತ್ತದೆ. ಸಂಜೆ 6.30 ರಿಂದ 7 ರವರೆಗೆ ಶ್ರೀ ಶಿರಡಿ ಸಾಯಿಬಾಬಾರವರ ಸಾಯಂಕಾಲದ ಆರತಿ, ರಾತ್ರಿ 9.30 ರಿಂದ 10 ರವರೆಗೆ ಶ್ರೀ ಸಾಯಿಬಾಬಾ ರವರ ಶೇಜಾರತಿ ಇರುತ್ತದೆ.

## ನಗರಕ್ಕೆ ನಾಳೆ ಮೂಳೆ ವೈದ್ಯರ ಭೇಟಿ

ದಾವಣಗೆರೆ, ಜು. 19 - ರಾಮನಗರ ಜಿಲ್ಲೆಯ ಕುದೂರಿನ ಪಾರಂಪರಿಕ ಮೂಳೆ ವೈದ್ಯ ಮಹದೇವಯ್ಯ ನಾಡಿದ್ದು ದಿನಾಂಕ 21ರ ಭಾನುವಾರ ನಗರಕ್ಕೆ ಆಗಮಿಸಲಿದ್ದು, ನಿಟುವಳ್ಳಿಯ ಪತಂಜಲಿ ವೆಲ್‌ನೆಸ್ ಸೆಂಟರ್‌ನಲ್ಲಿ ಮಧ್ಯಾಹ್ನ 3 ಗಂಟೆಗೆ ಚಿಕಿತ್ಸೆ ನೀಡಲಿದ್ದಾರೆ ಎಂದು ಕೆ.ಎಂ. ಪುಷ್ಪಲತಾ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9743895325, 8310748946, 9880107918.

# ದೇಶದ ಆಸ್ತಿ ರಾಷ್ಟ್ರೀಕೃತ ಬ್ಯಾಂಕುಗಳನ್ನು ಬಲಿಷ್ಠಗೊಳಿಸಲು ಆಗ್ರಹ




**ಬ್ಯಾಂಕ್ ರಾಷ್ಟ್ರೀಕರಣದ 56 ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಬ್ಯಾಂಕ್ ಎಂಪ್ಲಾಯೀಸ್ ಪೆಡರೇಶನ್ ಜಂಟಿ ಕಾರ್ಯದರ್ಶಿ ಕೆ.ರಾಘುವೇಂದ್ರ ನಾಯರಿ**

ದಾವಣಗೆರೆ, ಜು. 19 - ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಸುದೀರ್ಘ ಹೋರಾಟದ ಫಲವಾಗಿ 1969 ರ ಜುಲೈ 19 ರಂದು ಜಾರಿಗೆ ಬಂದ ಬ್ಯಾಂಕ್ ರಾಷ್ಟ್ರೀಕರಣವು ಜನತೆಗೆ ಆರ್ಥಿಕ ಸ್ವಾತಂತ್ರ್ಯವನ್ನು ನೀಡಿದ ದೇಶದ ಬಹುದೊಡ್ಡ ಆರ್ಥಿಕ ಕ್ರಾಂತಿಯಾಗಿದೆ ಎಂದು ಕರ್ನಾಟಕ ಪ್ರದೇಶ ಬ್ಯಾಂಕ್ ಎಂಪ್ಲಾಯೀಸ್ ಪೆಡರೇಶನ್ ಜಂಟಿ ಕಾರ್ಯದರ್ಶಿ ಕೆ.ರಾಘುವೇಂದ್ರ ನಾಯರಿ ಹೇಳಿದರು.

ನಗರದ ಬ್ಯಾಂಕ್ ನೌಕರರ ಸಂಘದ ಕಚೇರಿಯಲ್ಲಿ ಇಂದು ಏರ್ಪಾಡಾಗಿದ್ದ ಬ್ಯಾಂಕ್ ರಾಷ್ಟ್ರೀಕರಣದ 56 ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಂದಿನ ಪ್ರಧಾನಿಗಳಾಗಿದ್ದ ದಿವಂಗತ ಇಂದಿರಾ ಗಾಂಧಿ ಖಾಸಗಿ ವಲಯದ ಒಡೆತನ ದಲ್ಲಿದ್ದ 14 ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುವುದರ ಮೂಲಕ ಆರ್ಥಿಕ ಕ್ರಾಂತಿಗೆ ನಾಂದಿ ಹಾಡಿದರು. 1980 ರ ಎಪ್ರಿಲ್ 15 ರಂದು ಮತ್ತೆ 6 ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಬ್ಯಾಂಕ್ ರಾಷ್ಟ್ರೀಕರಣದ ಫಲವಾಗಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಯಾಯಿತು. ಬ್ಯಾಂಕಿಂಗ್ ಸೌಲಭ್ಯವು ದೇಶದ ಮೂಲೆ ಮೂಲೆಗೂ ತಲುಪುವಂತಾಯಿತು. ಉದ್ಯೋಗ ಸೃಷ್ಟಿ, ಶಿಕ್ಷಣ, ಆರೋಗ್ಯ, ಬಡತನ ನಿರ್ಮೂಲನೆ, ಆರ್ಥಿಕ ಅಭಿವೃದ್ಧಿ ಸೇರಿದಂತೆ ದೇಶದ ಸರ್ವತೋಮುಖ ಅಭಿವೃದ್ಧಿಗೆ ಬ್ಯಾಂಕ್ ರಾಷ್ಟ್ರೀಕರಣವು ಗಮನಾರ್ಹವಾದ ಕೊಡುಗೆಯನ್ನು ನೀಡಿದೆ.

ಆದರೆ ಸರ್ಕಾರದ ಖಾಸಗೀಕರಣ ನೀತಿಯ ಫಲವಾಗಿ ಇದೇ 22 ರಿಂದ ಆರಂಭವಾಗಲಿರುವ ಬಜೆಟ್ ಅಧಿವೇಶನದಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಸರ್ಕಾರವು ಮುಂದಾಗುವ ಸಾಧ್ಯತೆ ಇದೆ ಎನ್ನುವ ಸುದ್ದಿಗಳು ಮಾಧ್ಯಮದಲ್ಲಿ ಬಿತ್ತರವಾಗುತ್ತಿವೆ. ತಿದ್ದುಪಡಿಗೆ ಸಂಸತ್ತು ಅನುಮೋದನೆ ನೀಡಿದರೆ ಅದೊಂದು ರಾಷ್ಟ್ರೀಯ ದುರಂತಕ್ಕೆ ಕಾರಣವಾಗಲಿದೆ. ಸರ್ಕಾರವು ಖಾಸಗೀಕರಣಕ್ಕೆ ಮುಂದಾದರೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿರುವ ಜನಸಾಮಾನ್ಯರ 180 ಲಕ್ಷ ಕೋಟಿಗೂ ಹೆಚ್ಚಿನ ಠೇವಣಿ ಹಣದ ಸುರಕ್ಷತೆಗೆ ಅಪಾಯ ಎದುರಾಗಲಿದೆ. 2023-24ರ ಸಾಲಿನಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು 1,41,203 ಕೋಟಿ ರೂಪಾಯಿಗಳ ನಿವ್ವಳ ಲಾಭ ಗಳಿಸಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರೀಕೃತ ಬ್ಯಾಂಕುಗಳು ದೇಶದ ಆಸ್ತಿ. ಅದನ್ನು ಇನ್ನಷ್ಟು ಬಲಗೊಳಿಸಲು ಸರ್ಕಾರವು ಮುಂದಾಗಬೇಕೇ ವಿನಃ ಖಾಸಗೀಕರಣಗೊಳಿಸಬಾರದು ಎಂದು ನಾಯರಿ ಹೇಳಿದರು.

ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಮಾಜಿ ಅಧ್ಯಕ್ಷ ಅಜಿತ್‌ಕುಮಾರ್ ನ್ಯಾಮತಿ ಮಾತನಾಡಿ, ಸರ್ಕಾರದ ಅನೇಕ ಯೋಜನೆಗಳು ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕವೇ ಜನರನ್ನು ತಲುಪುತ್ತಿವೆ. ಖಾಸಗೀ ಬ್ಯಾಂಕುಗಳು ತಮ್ಮ ಲಾಭಕ್ಕಾಗಿ ಕಾರ್ಯ ನಿರ್ವಹಿಸುತ್ತವೆಯೇ ಹೊರತು ಸೇವಾ ಮನೋಭಾವನೆಯಿಂದ ಅಲ್ಲ ಎಂದರು.

ಸಂಘದ ಕಾರ್ಯದರ್ಶಿ ಹೆಚ್.ಎಸ್. ತಿಪ್ಪೇಸ್ವಾಮಿ ಮಾತನಾಡಿ, ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಧ್ಯೇಯ ವಾಕ್ಯದಂತೆ 'ಬ್ಯಾಂಕುಗಳು ಗಳಿಸುವ ಲಾಭವು ದೇಶದ ಜನರ ಕಲ್ಯಾಣಕ್ಕಾಗಿ ಬಳಕೆಯಾಗಬೇಕೇ ವಿನಹ ಖಾಸಗಿ ಕಂಪನೆಗಳ ಲೂಟಿಗಾಗಿ ಅಲ್ಲ' ಹಾಗೂ 'ಬ್ಯಾಂಕಿಂಗ್ ಸೌಲಭ್ಯಗಳು ನಾಗರಿಕರ ಮೂಲಭೂತ ಹಕ್ಕಾಗಬೇಕು ಎನ್ನುವ ನಿಟ್ಟಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿಂಗ್ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ನಮ್ಮ ಹೋರಾಟ ನಿರಂತರವಾಗಿ ನಡೆಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ದಾವಣಗೆರೆ, ಚಿತ್ರದುರ್ಗ ಜಿಲ್ಲಾ ನಿವೃತ್ತ ಬ್ಯಾಂಕ್ ನೌಕರರ ಒಕ್ಕೂಟದ ಉಪ ಪ್ರಧಾನ ಕಾರ್ಯದರ್ಶಿ ಹೆಚ್.ಸುಗುರಪ್ಪ, ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಖಜಾಂಚಿ ಕೆ. ವಿಶ್ವನಾಥ್ ಬಿಲ್ಲವ, ಉಪಾಧ್ಯಕ್ಷರುಗಳಾದ ಎಂ.ಎಂ.ಸಿದ್ದಲಿಂಗಯ್ಯ, ಆರ್. ಆಂಜನೇಯ, ಜಂಟಿ ಕಾರ್ಯದರ್ಶಿಗಳಾದ ಸಿ.ಪರಶುರಾಮ, ಎಂ.ಡಿ. ವಿದ್ಯಾಸಾಗರ್, ಶ್ರೀನಿವಾಸ ಎನ್.ವಿ, ಡಿ.ಎನ್. ಅಣ್ಣಪ್ಪ ನಂದಾ ಹಾಗೂ ಇತರೆ ಪದಾಧಿಕಾರಿಗಳಾದ ಎಂ.ರಮೇಶ್, ಪ್ರಶಾಂತ್ ಶ್ರೀನಿವಾಸ್, ಡಿ.ಹರ್ಷದ್, ನಾಗಭೂಷಣ ಎನ್.ಪಿ., ಗಜೇಂದ್ರ ಎಸ್, ಮತ್ತಿತರರು ಉಪಸ್ಥಿತರಿದ್ದರು.

## ಶ್ರೀಗಳ ಆಷಾಡ ಮಾಸದ ಇಷ್ಟಲಿಂಗ ಮಹಾಪೂಜೆ



ರಾಣೇಬೆನ್ನೂರು, ಜು. 19 - ಉಜ್ಜಯನಿ ಜಗದ್ಗುರು ಸಿದ್ದಲಿಂಗ ರಾಜದೇಶಿ ಕೇಂದ್ರ ಶ್ರೀಗಳ ಆಷಾಡ ಮಾಸದ ಇಷ್ಟಲಿಂಗ ಮಹಾಪೂಜೆ ಮೂರು ದಿನಗಳ ಕಾರ್ಯಕ್ರಮ ಇಂದು ಉದ್ಘಾಟನೆ. ಆವರಗೊಳ್ಳದ ಓಂಕಾರ ಶ್ರೀ ಗಳಿಂದ ನಡೆಯಿತು. ಹೊನ್ನಾಳಿ ಹಿರೇಕಲ್ಮಠದ ಚನ್ನಮಲ್ಲಿಕಾರ್ಜುನ ಶ್ರೀ ನೇತೃತ್ವ ವಹಿಸಿದ್ದರು.

ಸಂಜೆ ಜಗದ್ಗುರುಗಳನ್ನ ಸಕಲ ಬಿರುದಾವಳಿಗಳೊಂದಿಗೆ ಪೂರ್ಣಕುಂಬ ಹಾಗೂ ಮಂಗಲಕರ ವಾದ್ಯಗಳೊಂದಿಗೆ ಸಾರೋಟಿನಲ್ಲಿ ಮೃತ್ಯುಂಜಯ ಮಠದಿಂದ ಚನ್ನೇಶ್ವರ ಮಠಕ್ಕೆ ಕರೆತರಲಾಯಿತು. ನಂತರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಧರ್ಮಸಭೆ ನಡೆಯಿತು.

ಜಗದ್ಗುರುಗಳ ಸದ್ಭಕ್ತರಾದ ಬಸವರಾಜ ಪಟ್ಟಣಶೆಟ್ಟಿ, ಸುನಂದ ತಿಳವಳ್ಳಿ, ಕಸ್ತೂರಿ ಪಾಟೀಲ, ಫಕ್ಕಿರೇಶ ಭಸ್ಮಾಂಗಿಮಠ, ಹಾಲೇಶ ಗೌಳಿ, ಎಸ್.ಆರ್.ಕೆ. ಬಸವರಾಜ ಮತ್ತಿತರರು ಕಾರ್ಯಕ್ರಮದಲ್ಲಿ ಪಸಲ್ಗೊಂಡಿದ್ದರು. ಕೊನೆಯಲ್ಲಿ ಜಗದ್ಗುರುಗಳಿಂದ ಆಶೀರ್ವಚನ ನಡೆಯಿತು.

## ನಗರದಲ್ಲಿಂದು ಉಚಿತ ನೋಟ್ ಬುಕ್ ವಿತರಣೆ, ಕಲಾವಿದರಿಗೆ ಪ್ರಶಸ್ತಿ ಪ್ರದಾನ

ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ವತಿಯಿಂದ ಇಂದು ಮಧ್ಯಾಹ್ನ 3 ಗಂಟೆಗೆ ರೋಟರಿ ಬಾಲಭವನದಲ್ಲಿ ಬಸಾಪುರದ ಶ್ರೀ ರೇವಣಸಿದ್ದೇಶ್ವರ ವಿದ್ಯಾಸಂಸ್ಥೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ವಿತರಣೆ ಹಾಗೂ ಕಲಾವಿದರುಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಯರಗುಂಟೆ ಶ್ರೀ ಗುರು ಕರಿಬಸವೇಶ್ವರ ಗದ್ದುಗೆ ಮಠದ ಶ್ರೀ ಪರಮೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಹೆಚ್.ಕೆ. ಲಿಂಗರಾಜ್ ಕಾರ್ಯಕ್ರಮ ಉದ್ಘಾಟಿಸುವರು. ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಸವರಾಜ ಐರಣಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಾಹಿತಿ ಹೆಚ್.ಕೆ. ಸತ್ಯಭಾಮ, ಬಸಾಪುರ ಶ್ರೀ ರೇವಣಸಿದ್ದೇಶ್ವರ ಪ್ರೌಢಶಾಲೆ ಮುಖ್ಯೋಪಾಧ್ಯಾಯಿನಿ ಕೆ.ಜಿ. ಸೌಭಾಗ್ಯ, ಬಸವ ಬಳಗದ ದೇವಿಗೆರೆ ಗಿರೀಶ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಕೆ. ಶಿವಶಂಕರ್, ಬಿಜೆಪಿ ಮುಖಂಡ ಹೆಚ್.ಎನ್. ಶಿವಕುಮಾರ್ ಆಗಮಿಸಲಿದ್ದಾರೆ.

## ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ವಾರ್ಷಿಕೋತ್ಸವ

ಬಾಡಾ ಕ್ರಾಸ್‌ನಲ್ಲಿರುವ ವೀರೇಶ್ವರ ಪುಣ್ಯಾಶ್ರಮದಲ್ಲಿ ಕರ್ನಾಟಕ ಮಹಿಳಾ ಮತ್ತು ಮಕ್ಕಳ ಸಾಧನ ಅಭಿವೃದ್ಧಿ ಚಾರಿಟಬಲ್ ಟ್ರಸ್ಟ್‌ನ ವಾರ್ಷಿಕೋತ್ಸವ, ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಅಭಿನಂದನಾ ಕಾರ್ಯಕ್ರಮ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಇಂದು ಏರ್ಪಡಿಸಲಾಗಿದೆ.

ಬೆಳಿಗ್ಗೆ 11.30ಕ್ಕೆ ನಡೆಯುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸಲಿದ್ದಾರೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಕರ್ನಾಟಕ ಮಹಿಳಾ ಮತ್ತು ಮಕ್ಕಳ ಸಾಧನ ಅಭಿವೃದ್ಧಿ ಚಾರಿಟಬಲ್ ಟ್ರಸ್ಟ್‌ನ ರಾಜ್ಯಾಧ್ಯಕ್ಷರಾದ ಡಾ. ಪುಷ್ಪಲತಾ ಪವಿತ್ರರಾಜ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಹೆಚ್.ಎಸ್. ನಾಗರಾಜ್, ಯುಗಧರ್ಮ ರಾಮಣ್ಣ, ಡಾ.ಸೈಯದ್, ದೊಡ್ಡಬಾತಿ ರವಿಕುಮಾರ್, ಅಥಣಿ ವೀರಣ್ಣ, ಜೆ.ಎನ್. ಕರಿಬಸಪ್ಪ ಜಾಲಿಮರದ, ಮಹಾಂತೇಶ್ ಒಣರೊಟ್ಟಿ, ಸೋಗಿ ಶಾಂತಕುಮಾರ್, ಬಾಡದ ಆನಂದರಾಜ್, ಅನ್ವರ್ ಭಾಷಾ, ಜರೀಕಟ್ಟೆ ಹನುಮಂತಪ್ಪ, ರಶ್ಮಿ ನಾಗರಾಜ್ ಕುಂಕೋದ್, ಭರಮಸಾಗರ ಮಂಜುನಾಥ, ಜಗನ್ನಾಥ ಉಪಸ್ಥಿತರಿರುವರು.

## ಸೃಷ್ಟಿಗೆ 'ಸೇವಾ ಯೋಧ ರತ್ನ' ಪ್ರಶಸ್ತಿ

**ಹರಿಹರ**

ಹರಿಹರ, ಜು. 19- ಹರಿಹರದ ಯುವ ಉದಯೋನ್ಮುಖ ಕ್ರೀಡಾಪಟು, ಎಸ್‌ಜೆಸಿಪಿಎಸ್ ಶಾಲೆಯ ಒಂಭತ್ತನೇಯ ತರಗತಿಯ ವಿದ್ಯಾರ್ಥಿನಿ ಕೆ.ವೈ.ಸೃಷ್ಟಿ ಅವರ ಸಾಧನೆ ಪರಿಗಣಿಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಮಾನ್ಯತೆ ಪಡೆದಿರುವ ಶಿವಮೊಗ್ಗದ 'ಕರ್ನಾಟಕ ಯೂತ್ ವೆಲ್ ಫೇರ್ ಅಸೋಸಿಯೇಷನ್' ಸೇವಾ ಯೋಧ ರತ್ನ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ.

ಶಿವಮೊಗ್ಗದ ಖಾಸಗಿ ಹೋಟೆಲ್ ನಲ್ಲಿ ಇತ್ತೀಚಿಗೆ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸರಿಗಮಪ ಸೀಜನ್ 19 ರ ರನ್ನರ್ ಅಪ್ ಶಿವನಿ ಪ್ರದರ್ಶನ ನೀಡಿ ಕಾರ್ಯಕ್ರಮಕ್ಕೆ ಮೆರಗು ತಂದರು.

ಡಾ.ಕರಾಟೆ ಎ.ಪಿ. ಶ್ರೀನಾಥ್, ಡಾ.ಎಸ್. ನಂದನ್, ಡಾ. ಕೃಷ್ಣ ಕುಲಾಲ್, ಡಾ. ಶ್ರೀಕಾಂತ್ ಮಂಗಳಾ ಅವರಿಗೆ ರಿಯಾಲಿಟಿ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಅವಾರ್ಡ್ಸ್ ಪ್ರಶಸ್ತಿ ನೀಡಲಾಯಿತು.

ಡಾ.ಶ್ರೀನಿವಾಸ, ಶಿವಕುಮಾರ ಶೆಟ್ಟಿ, ಕಾರ್ಯಕ್ರಮದ ರೂವಾರಿ ನವೀನ್ ಮತ್ತಿತರರು ಇದ್ದರು.



## ರಶ್ಮಿ ಮೊತ್ಕೂರ್‌ಗೆ ಪಿಹೆಚ್‌ಡಿ ಪದವಿ



ದಾವಣಗೆರೆ, ಜು. 19- ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಿನ್ನೆ ನಡೆದ 24ನೇ ವಾರ್ಷಿಕ ಘಟಿಕೋತ್ಸವ ದಲ್ಲಿ ಉಪ ಕುಲಪತಿ ಡಾ. ಎಸ್. ವಿದ್ಯಾಶಂಕರ್ ಅವರು ನಗರದ ಶ್ರೀಮತಿ ರಶ್ಮಿ ಮೊತ್ಕೂರ್ ಅವರಿಗೆ ಪಿಹೆಚ್‌ಡಿ ಪದವಿ ಪ್ರದಾನ ಮಾಡಿದರು. ರಶ್ಮಿ ಮೊತ್ಕೂರ್, ಸ್ಥಳೀಯ ಜಿಎಂಐಟಿ ಕಾಲೇಜಿನ ಸಿಎಸ್‌ಇ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎನ್. ವೀರಪ್ಪ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಎ ಹೈಬ್ರಿಡ್ ಅಪ್ರೋಚ್ ಫಾರ್ ಲಂಗ್ ಕ್ಯಾನ್ಸರ್ ಕ್ಲಾಸಿಫಿಕೇಷನ್ ಯೂಸಿಂಗ್ ಡೀಪ್ ಲರ್ನಿಂಗ್ ಅಂಡ್ ಮೆಟಾಹ್ಯೂರಿಸ್ಟಿಕ್ ಮೆಥೆಡ್ಸ್' ಎಂಬ ಮಹಾ ಪ್ರಬಂಧಕ್ಕೆ ಪಿಹೆಚ್‌ಡಿ ಪದವಿ ಪಡೆದಿರುತ್ತಾರೆ.

ಶ್ರೀಮತಿ ರಶ್ಮಿ, ನಿವೃತ್ತ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎನ್. ಲಿಂಗಾರೆಡ್ಡಿ ಹಾಗೂ ಶ್ರೀಮತಿ ಪ್ರಮೀಳಾ ದಂಪತಿ ಪುತ್ರಿ.

## ನಗರದಲ್ಲಿ ಇಂದು ಭಾವಸಾರ ಕ್ಷತ್ರಿಯ ದೈವ ಮಂಡಳಿ ಸಭೆ



ಮಹಾರಾಜ ಪೇಟೆಯ ಭಾವಸಾರ ಕ್ಷತ್ರಿಯ ದೈವ ಮಂಡಳಿಯ ಸರ್ವ ಸದಸ್ಯರ ಮಹಾಸಭೆ ಇಂದು ಸಂಜೆ 5 ಗಂಟೆಗೆ ನಡೆಯಲಿದೆ.



**ಕೃಷ್ಣಾರ್ಜುನ ಕಾಳಗ**

**ದಾವಣಗೆರೆಯ ದಂತ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿರುವ ಬಾಪೂಜಿ ಸಭಾಂಗಣದಲ್ಲಿ ವೃತ್ತಿ ರಂಗಭೂಮಿ ರಂಗಾಯಣ, ಬಾಪೂಜಿ ವಿದ್ಯಾಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಎಸ್.ಎಸ್. ಕೇರ್ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿರುವ ಮಕ್ಕಳ ನಾಟಕೋತ್ಸವದ 2ನೇ ದಿನವಾದ ಶುಕ್ರವಾರ ಕೃಷ್ಣಾರ್ಜುನ ಕಾಳಗ' ನಾಟಕ ಪ್ರದರ್ಶನಗೊಂಡಿತು.**

## ಮಕ್ಕಳಿಗೆ ಡೆಂಗ್ಯೂ ನಿಯಂತ್ರಣ ಜಾಗೃತಿ



**ಹರಪನಹಳ್ಳಿ**

ಹರಪನಹಳ್ಳಿ, ಜು.19 - ಸರ್ಕಾರಿ ಆಯುರ್ವೇದ ಆಸ್ಪತ್ರೆ ವತಿಯಿಂದ ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆಯಲ್ಲಿ ಡೆಂಗ್ಯೂ ನಿಯಂತ್ರಣ ಕುರಿತು ಮಕ್ಕಳಿಗೆ ಜಾಗೃತಿ ಮೂಡಿಸಲಾಯಿತು. ನಮ್ಮ ಸುತ್ತ ಮುತ್ತಲಿನ ಪರಿಸರ ಶುಚಿಯಾಗಿಡದಿದ್ದರೆ ನಿಂತ ನೀರಲ್ಲಿ ಸೊಳ್ಳೆ ಉತ್ಪತ್ತಿಯಾಗಿ ಡೆಂಗ್ಯೂ ಸೇರಿದಂತೆ ಹಲವಾರು ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಹಾಗಾಗಿ ನೀರು ನಿಲ್ಲದಂತೆ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಆಯುರ್ವೇದ ಆಸ್ಪತ್ರೆಯ ವೈದ್ಯ ಶಿವಕುಮಾರ ಗಾಣಿಗ ಮಕ್ಕಳಿಗೆ ಸಲಹೆ ನೀಡಿದರು. ಈ ವೇಳೆ ವೈದ್ಯರಾದ ಗೀತಾ, ಸವಿತಾ, ವಿಶ್ವಾಸ್, ಆಸ್ಪತ್ರೆಯ ಸಿಬ್ಬಂದಿ ಮತ್ತು ಶಿಕ್ಷಕರಿದ್ದರು.

## ಇಂದು ನಗರದಲ್ಲಿ ರಸಮಂಜರಿ

ದಾವಣಗೆರೆ : ಬಾಲಿವುಡ್ ಚಿತ್ರನಟ ಸಲ್ಮಾನ್ ಖಾನ್ ಅಭಿಮಾನಿ ಬಳಗದ ಆಶ್ರಯದಲ್ಲಿ ಇಂದು ಸಾಯಂಕಾಲ ಹಿಂದಿ ಚಲನಚಿತ್ರ ಗೀತೆಗಳ ರಸಮಂಜರಿ ಕಾರ್ಯಕ್ರಮ ಜರುಗಲಿದೆ. ಜೂ. ಎಸ್.ಪಿ. ಬಾಲಸುಬ್ರಮಣ್ಯಂ ಎಂಬ ಪ್ರಖ್ಯಾತಿ ಹೊಂದಿರುವ ಸಲ್ಮಾನ್ ಅವರು ಅರ್ಪಿಸುವ ಈ ಕಾರ್ಯಕ್ರಮ ಸಂಜೆ 6 ಗಂಟೆಗೆ ಆಯಿಷಾ ಶಾದಿಮಹಲ್ ನಲ್ಲಿ ನಡೆಯಲಿದೆ. ಸ್ಥಳೀಯ ಕಲಾವಿದರು ಹಾಡಿ ರಂಜಿಸಲಿದ್ದಾರೆ. ಪತ್ರಕರ್ತ ಬಿ. ಸಿಕಂದರ್, ಅತಿಥಿಗಳಾಗಿ ಪಾಲ್ಗೊಳ್ಳುವರು.

## ನಗರದಲ್ಲಿ ಇಂದು ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ ಕುರಿತ ಸಂವಾದ

ವರ್ತಮಾನ ಫೋರಂ ಫಾರ್ ಇಂಟಲ್‌ಕ್ಚುಯಲ್ ಡಿಬೆಟ್ಸ್ (ದಾವಣಗೆರೆ) ವತಿಯಿಂದ ಇಂದು ಸಂಜೆ 6 ಗಂಟೆಗೆ 'ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ' ಕಾರ್ಯಕ್ರಮ ಕುರಿತು ಸಂವಾದ ಶಾಂತಿ ರಾಯಲ್ ಹಾಲ್‌ನಲ್ಲಿ ನಡೆಯಲಿದೆ. ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ ರಾಜೇಶ್ ಪದ್ಮಾರ್ ವಿಷಯ ಮಂಡನೆ ಮಾಡಲಿದ್ದಾರೆ.



# ಹರಿಹರ : ಶೈಕ್ಷಣಿ ಬೆಳವಣಿಗೆಗೆ ಕ್ರೀಡೆ ಸಹಕಾರಿ

ಹರಿಹರ, ಜು. 19 - ಆರೋಗ್ಯದ ದೃಷ್ಟಿಯಿಂದ ಕ್ರೀಡೆ ಸಹಕಾರಿಯಾಗುತ್ತದೆ. ಅದರೊಂದಿಗೆ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಬೆಳವಣಿಗೆಗೂ ಕ್ರೀಡಾ ಚಟುವಟಿಕೆ ಸಹಕರಿಸಲಿದೆ ಎಂದು ರಾಷ್ಟ್ರಮಟ್ಟದ ವಾಲಿಬಾಲ್ ಕ್ರೀಡಾಪಟು ಇಮ್ತಿಯಾಜ್ ಅಹಮದ್ ಅವರು ಅಭಿಪ್ರಾಯಪಟ್ಟರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕ ಕ್ರೀಡಾಕೂಟದ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗಾಗಿ ಮೊನ್ನೆ ಆಯೋಜಿಸಿದ್ದ ಬಹುಮಾನ ವಿತರಣಾ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ಸರ್ಕಾರವು ಇಂದು ಕ್ರೀಡಾಪಟುಗಳಿಗೆ ಯುವಜನ ಮತ್ತು ಕ್ರೀಡಾ ಇಲಾಖೆಯ ಮೂಲಕ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದ್ದು, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಸಹಾಯವಾಗುವ ಅನುಕೂಲಗಳನ್ನು ಕ್ರೀಡಾ ಕೋಟಾದ ಅಡಿಯಲ್ಲಿ ಯುವಕರು ಪಡೆಯಬಹುದಾಗಿದೆ. ಆಮೂಲಕ ತಮಗಾಗಿ ಹಗಲು- ರಾತ್ರಿ ಪರಿಶ್ರಮ ಪಡುವ ತಮ್ಮ ಪೋಷರಿಗೆ ಕೀರ್ತಿ ತರುವಂತೆ ಯುವಕರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಐಕ್ಯೂಎಸಿ ಸಹ ಸಂಚಾಲಕರಾದ ಡಾ.ಅನಂತನಾಗ್ ಹೆಚ್.ಪಿ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಯ ಮನೋಭಾವ ಬೆಳೆಸಿಕೊಳ್ಳಬೇಕು. ಆ ಮೂಲಕ ವಿದ್ಯಾರ್ಥಿ ಜೀವನ ಸಾರ್ಥಕಗೊಳಿಸಿಕೊಳ್ಳುವಂತೆ ತಿಳಿಹೇಳಿದರು.

ಕಾಲೇಜಿನ ಗ್ರಂಥಪಾಲಕರಾದ ಚಿದಾನಂದಪ್ಪ, ಸಹ ಪ್ರಾಧ್ಯಾಪಕರಾದ ಡಾ.ಕುಮಾರ್ ಎಂ, ಡಾ. ಗೌರಮ್ಮ ಎಸ್.ಎಂ, ಡಾ.ಬಾಬು ಕೆ.ಎ, ಡಾ. ತಿಪ್ಪೇಸ್ವಾಮಿ ಹೆಚ್, ಡಾ.ದೂಪಹಳ್ಳಿ ಬಸವರಾಜ, ಡಾ.ಎಸ್.ತಿರುಮಲೇಶ್, ಡಾ.ದ್ರಾಕ್ಷಾಯಿಣಿ ಜಿ. ಎನ್, ಡಾ.ಮಮತಾ ಹೆಚ್. ಸಾಹುಕಾರ್, ಲಕ್ಷ್ಮಣನಾಯ್ಕ ಆರ್, ಮಂಜುನಾಥ ನರಸಗೊಂಡ, ಡಾ.ಯತೀಶ್ ಎಲ್.ಕೋಡಾವತ್ ಅವರುಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಿ.ಎ ವಿದ್ಯಾರ್ಥಿನಿ ಅರ್ಪಿತಾ ಪ್ರಾರ್ಥಿಸಿದರು. ಬಿ.ಕಾಂ ವಿದ್ಯಾರ್ಥಿನಿ ಎಂ.ಎಸ್.ಲತಾ ಅವರು ಸ್ವಾಗತಿಸಿದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಚಂದ್ರಶೇಖರ್.ಸಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯಕ್ರಮ ನಿರ್ವಹಿಸಿದರು. ಬಿ. ಕಾಂ ವಿದ್ಯಾರ್ಥಿನಿ ಆಶ್ಲೇಷಾ ಅವರು ವಂದಿಸಿದರು.

# ಬಾರ್ ಸ್ಥಳಾಂತರಕ್ಕೆ ಒತ್ತಾಯಿಸಿ ಪ್ರತಿಭಟನೆ




ದಾವಣಗೆರೆ, ಜು. 19- ಕೆ.ಎಸ್. ವೈನ್ ಲ್ಯಾಂಡ್ ಸ್ಥಳಾಂತರ ಮಾಡುವಂತೆ ಒತ್ತಾಯಿಸಿ ವಿನೋಬನಗರ ಮತ್ತು ಯಲ್ಲಮ್ಮನಗರದ ನಿವಾಸಿಗಳು ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ವಿನೋಬನಗರ 4 ನೇ ಮುಖ್ಯರಸ್ತೆಯಲ್ಲಿರುವ ಕೆ.ಎಸ್. ವೈನ್ ಲ್ಯಾಂಡ್ ನಿಂದ ಸ್ಥಳೀಯ ನಾಗರಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಸ್ಥಳಾಂತರ ಮಾಡುವಂತೆ ಸಂಬಂಧಿಸಿದ ಅಬಕಾರಿ ಅಧಿಕಾರಿಗಳಿಗೆ ಹಾಗೂ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ನಿತ್ಯ ಮದ್ಯ ಸೇವನೆ ಮಾಡಿ ಜಗಳವಾಡುವುದು, ಬಾರ್ ಬಳಿ ಮೂತ್ರ ವಿಸರ್ಜನೆ, ವಾಂತಿ ಮಾಡುವುದು, ಮಹಿಳೆಯರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸುವುದನ್ನು ಮಾಡುತ್ತಾರೆ. ಇದರಿಂದ ನಾಗರಿಕರಿಗೆ ಕಿರಿಕಿರಿ ಉಂಟಾಗುತ್ತದೆ ಎಂದರು.

ಬಾರ್ ಸ್ಥಳಾಂತರ ಮಾಡುವಂತೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ನಿವಾಸಿಗಳಾದ ಅನುಪಮ ರವಿಕುಮಾರ್, ವಿಜಯಲಕ್ಷ್ಮಿ ನಿರಂಜನ್, ನಿವೇದಿತಾ ಸಚ್ಚಿನ್, ಭಾಗೀರಥಿ ಪಾಂಡುರಂಗ, ಸರೋಜಾ, ವಿಜಯಾ, ನಾಗರಾಜ್, ಸೋಗಿ ವೀರೇಶ್ ಮತ್ತಿತರರು ಭಾಗವಹಿಸಿದ್ದರು.

## ನಗರದಲ್ಲಿಂದು ಐರಣಿ ಹೊಳೆಮಠದ ವಾರ್ಷಿಕೋತ್ಸವ, ಗುರುಪೂರ್ಣಿಮೆ


ಐರಣಿ ಹೊಳೆಮಠ ಮಹಾಸಂಸ್ಥಾನ ಶಾಖಾಮಠದಲ್ಲಿ ಗುರುಪೌರ್ಣಿಮೆ ಹಾಗೂ ಶಾಖಾಮಠದ 17ನೇ ವಾರ್ಷಿಕೋತ್ಸವ ಸಮಾರಂಭವು ಇಂದು ಮತ್ತು ನಾಳೆ ನಡೆಯಲಿದೆ.

ಎರಡು ದಿನಗಳ ಬೆಳಿಗ್ಗೆ 7.30 ಕ್ಕೆ ಸತ್ಸಂಗ, ಭಜನೆ, ಪ್ರವಚನ ಕಾರ್ಯಕ್ರಮಗಳು ನಡೆಯಲಿವೆ. ಶ್ರೀ ಸದ್ಗುರು ಬಸವರಾಜ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಮ್ಮುಖದಲ್ಲಿ ಗುರುಪೌರ್ಣಿಮೆ ಜರುಗುವುದು. ಕುಳ್ಳೂರು ಬಸವಾನಂದ ಭಾರತಿ ಸ್ವಾಮೀಜಿ ಮತ್ತು ಜಡೇಸಿದ್ದೇಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಉಪನ್ಯಾಸ ನೀಡಲಿದ್ದಾರೆ.

ನಾಳೆ ಭಾನುವಾರ ಅಖಂಡ ಗುರು ಭಜನೆ, ಪಂಚಾಮೃತ ಅಭಿಷೇಕ, ಕೈಲಾಸ ಮಹಾಪೂಜೋತ್ಸವ ದರ್ಶನ, ಮಹಾಮಂಗಳಾರತಿ, ಮಹಾಪ್ರಸಾದವಿದ್ದು, ಪ್ರತಿ ದಿನ ಸಂಜೆ ಭಕ್ತಿ ಗೀತೆ ಕಾರ್ಯಕ್ರಮ ನಡೆಯಲಿದೆ.

AARAIKE SUPER SPECIALITY HOSPITAL
Our commitment - Your Health
WE ARE HIRING STAFF NURSES
JOB REQUIREMENT
• Certified Nursing Staff
• Minimum 2 years of experience as Staff Nurse
• OT Nursing Staff with 2 years experience
• Ready to work in Shifts
• Ready to work as team
• Good Communication and professional Skill
SEND YOUR RESUME CONTACT US:
9606084128, 9343544999
aaraikehospitalshrdvg@gmail.com

# ನಗರದ ಸಾಯಿ ಮಂದಿರದಲ್ಲಿ ನಾಳೆ ಗುರುಪೂರ್ಣಿಮೆ, ವಿಶೇಷ ಪೂಜೆ



ದಾವಣಗೆರೆ, ಜು. 19- ಸ್ಥಳೀಯ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ನಾಡಿದ್ದು ದಿನಾಂಕ 21ರ ಭಾನುವಾರ ಗುರು ಪೂರ್ಣಿಮೆ ಆಚರಿಸಲಾಗುವುದು.

ಅಂದು ಬೆಳಿಗ್ಗೆ 6 ಕ್ಕೆ ಕಾಕಡಾ ರತಿ, 9 ಕ್ಕೆ ದೀಪಾ ರಾಧನೆ, ಕಲಶ ಸ್ಥಾಪನೆ, ನಂತರ ಗೋಪುರ ಧ್ವಜಾರೋಹಣ ಕಾರ್ಯ ಕ್ರಮಗಳು ಏರ್ಪಾಡಾಗಿವೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ. ಶ್ರೀ ಜಡೇಸಿದ್ಧ ಶಿವಯೋ ಗೀಶ್ವರ ಶಾಂತಾಶ್ರಮದ ಶ್ರೀ ಶಿವಾನಂದ ಸ್ವಾಮೀಜಿ, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಸ್. ಎಸ್. ಗಣೇಶ್, ಉಪಾಧ್ಯಕ್ಷ ಅಥಣಿ ವೀರಣ್ಣ ಹಾಗೂ ಇತರೆ ಗಣ್ಯರು ಉಪಸ್ಥಿತರಿರುವರು.

ಬೆಳಿಗ್ಗೆ 7 ರಿಂದ 2.30 ರವರೆಗೆ ಶ್ರೀ ಬಾಬಾರವರ ಬೆಳ್ಳಿಯ ಮೂರ್ತಿಗೆ ಹಾಲಿನ ಅಭಿಷೇಕ, ವಿಶೇಷ ಪೂಜೆ, ಅಲಂಕಾರ ಹಾಗೂ 12 ಕ್ಕೆ ಮಹಾಮಂಗಳಾರತಿ ನಡೆಸಲಾಗುವು ದು. ಬೆಳಿಗ್ಗೆ 9 ರಿಂದ ಮಧ್ಯಾಹ್ನ 12ರವರೆಗೆ ಸಾಯಿ ಸತ್ಯನಾರಾಯಣ ಪೂಜೆ, ರಾತ್ರಿ 8.30 ಕ್ಕೆ ಪಾಲಕಿ ಉತ್ಸವ, ಶ್ರೀಸಾಯಿ ಧುನಿ ಪೂಜೆ, ಶೇಜಾರತಿ ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ನಡೆಯುವುದು.

## ನಗರ ಪಾಲಿಕೆಯಿಂದ ಮನೆ - ಮನೆ ಸಮೀಕ್ಷೆ ಕಾರ್ಯ

ದಾವಣಗೆರೆ, ಜು.19- ಮಹಾನಗರಪಾಲಿಕೆ ವ್ಯಾಪ್ತಿಯ 45 ವಾರ್ಡ್‌ಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು ಮೊಬೈಲ್ ಆಪ್ ಮೂಲಕ ಮನೆ - ಮನೆ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದೆ. ಮೊಬೈಲ್ ಆಫ್‌ಗೆ ಸಂಬಂಧಿಸಿದಂತೆ ಕೇಳುವ ಪೂರ್ಣ ಮಾಹಿತಿಯನ್ನು ಕೊಡುವುದರೊಂದಿಗೆ ಸರ್ವೇ ಕಾರ್ಯ ಯಶಸ್ವಿಗೊಳಿಸಬೇಕೆಂದು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.

### ಮೈಕ್ರೋಸಾಫ್ಟ್ ವ್ಯತ್ಯಯ : ಅಪ್ಡೇಟ್ ವ್ಯತ್ಯಾಸದಿಂದಾಗಿ ವಿಂಡೋಸ್ ಕಂಪ್ಯೂಟರ್‌ಗಳ ಮೇಲೆ ಪರಿಣಾಮ

# ವಿಮಾನದಿಂದ ಆಸ್ಪತ್ರೆಗಳವರೆಗೆ ಸಮಸ್ಯೆಗಳ ಸರಮಾಲೆ

ನವದೆಹಲಿ, ಜು. 19 - ಕ್ರೌಡ್‌ಸ್ಟ್ರೈಕ್ ಅಪ್ಡೇಟ್ ವ್ಯತ್ಯಾಸದಿಂದಾಗಿ ವಿಶ್ವದಾದ್ಯಂತ ಮೈಕ್ರೋಸಾಫ್ಟ್ ವಿಂಡೋಸ್ ಕಾರ್ಯನಿರ್ವಹಣೆಯಲ್ಲಿ ವ್ಯತ್ಯಯವಾಗಿದೆ. ಇದರಿಂದಾಗಿ ವಿಮಾನಗಳಿಂದ ಹಿಡಿದು ಆಸ್ಪತ್ರೆಗಳ ಕಾರ್ಯ ನಿರ್ವಹಣೆಯವರೆಗೆ ಪರಿಣಾಮವಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಸೈಬರ್ ಸೆಕ್ಯೂರಿಟಿ ಉದ್ಯಮವಾದ ಕ್ರೌಡ್‌ಸ್ಟ್ರೈಕ್, ಸೈಬರ್ ದಾಳಿಯಿಂದ ಈ ಸಮಸ್ಯೆ ಉಂಟಾಗಿಲ್ಲ. ಮೈಕ್ರೋಸಾಫ್ಟ್ ವಿಂಡೋಸ್ ಆಧಾರಿತ ಕಂಪ್ಯೂಟರ್‌ಗಳ ಅಪ್ಡೇಟ್ ಅಳವಡಿಕೆ ಮಾಡುವಾಗ ವ್ಯತ್ಯಾಸವಾಗಿ ಸಮಸ್ಯೆ ಉಂಟಾಗಿದೆ ಎಂದು ತಿಳಿಸಿದೆ. ಕ್ರೌಡ್‌ಸ್ಟ್ರೈಕ್ ಸಂಸ್ಥೆಯು ಬೃಹತ್ ಕಂಪನಿಗಳಿಗೆ ಸೈಬರ್ ಸೆಕ್ಯುರಿಟಿ ಒದಗಿಸುತ್ತದೆ.

ಯುರೋಪ್, ಅಮೆರಿಕ ಹಾಗೂ ಏಷ್ಯಾದ ವಿಮಾನಗಳ ಕಾರ್ಯನಿರ್ವಹಣೆ ಮೇಲೆ ಪರಿಣಾಮವಾಗಿತ್ತು. ಆಸ್ಟ್ರೇಲಿಯಾದಲ್ಲಿ ದೂರಸಂಪರ್ಕ ಕಾರ್ಯನಿರ್ವಹಣೆ ಮೇಲೆ ತೀವ್ರ ಪರಿಣಾಮವಾಗಿದೆ.

ದಕ್ಷಿಣ ಆಫ್ರಿಕಾ ಹಾಗೂ ನ್ಯೂಜಿಲ್ಯಾಂಡ್‌ಗಳಲ್ಲಿ ಪಾವತಿ ವ್ಯವಸ್ಥೆ ವೆಬ್‌ಸೈಟ್ ಹಾಗೂ ಆಪ್‌ಗಳ ಕಾರ್ಯನಿರ್ವಹಣೆ ಮೇಲೆ ಪರಿಣಾಮವಾಗಿದೆ.

ಒಲಿಂಪಿಕ್ಸ್‌ಗಾಗಿ ಪ್ಯಾರಿಸ್‌ಗೆ ತೆರಳಬೇಕಿದ್ದ ಕ್ರೀಡಾಪಟುಗಳು ಸಮಸ್ಯೆ ಎದುರಿಸಬೇಕಾಯಿತು. ಆದರೆ, ಒಲಂಪಿಕ್ ಪಂದ್ಯಾವಳಿ ಮೇಲೆ ಪರಿಣಾಮವಾಗಿಲ್ಲ ಎಂದು ಆಯೋಜಕರು ತಿಳಿಸಿದ್ದಾರೆ. ವಿಶ್ವದಾದ್ಯಂತ ವಿಮಾನ ಸಂಸ್ಥೆಗಳ ಪಾವತಿ ಹಾಗೂ ಆನ್‌ಲೈನ್ ವಹಿವಾಟು ತಾಣಗಳ ಮೇಲೆ ಪರಿಣಾಮವಾಗಿರುವುದು ಕಂಡುಬಂದಿದೆ. ಆದರೆ, ಆಸ್ಪತ್ರೆಗಳ ಕಾರ್ಯನಿರ್ವಹಣೆ ಜನರ ಮೇಲೆ ಹೆಚ್ಚು ಪರಿಣಾಮವಾಗಿದೆ ಎಂದು ಸೈಬರ್ ಪರಿಣಿತ ಜೇಮ್ಸ್ ಬೋರ್ ಹೇಳಿದ್ದಾರೆ.

ಈ ಸಮಸ್ಯೆ ನಿವಾರಣೆಗೆ ಕ್ರಮ ತೆಗೆದುಕೊಳ್ಳುತ್ತಿರುವುದಾಗಿ ಮೈಕ್ರೋಸಾಫ್ಟ್ ಕಂಪನಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕ್ರೌಡ್‌ಸ್ಟ್ರೈಕ್ ಹೇಳಿಕೆ ನೀಡಿದ್ದು, ವಿಂಡೋಸ್ ಹೋಸ್ಟ್‌ಗಳ ಅಪ್ಡೇಟ್ ಮಾಡುವಾಗ ಸಮಸ್ಯೆಯಾಗಿದೆ. ಈ ಸಮಸ್ಯೆ ಬಗೆಹರಿಸಲಾಗಿದೆ ಎಂದು ತಿಳಿಸಿದೆ.

ಆಸ್ಟ್ರೇಲಿಯಾದಲ್ಲಿ ಅತಿ ಹೆಚ್ಚಿನ ಸಮಸ್ಯೆ ಕಂಡು ಬಂದಿತ್ತು. ಬ್ಯಾಂಕಿಂಗ್ ಕಾರ್ಯನಿರ್ವಹಣೆ, ವಿಮಾನ ಯಾನ, ಇಂಟರ್ನೆಟ್ ಹಾಗೂ ದೂರವಾಣಿ ಸೇವೆಯ ಮೇಲು ಪರಿಣಾಮ ಕಂಡುಬಂದಿತ್ತು. ಕೆಲವು ಸುದ್ದಿವಾಹಿನಿಗಳು ಗಂಟೆಗಳ ಕಾಲ ಸುದ್ದಿಪ್ರಸಾರ ಮಾಡಲು ಸಾಧ್ಯವಾಗಲಿಲ್ಲ. ಕಂಪ್ಯೂಟರ್‌ಗಳು ನಿಷ್ಕ್ರಿಯವಾಗಿ ನೀಲಿ ತೆರೆ ತೋರಿಸುತ್ತಿದ್ದ ದೃಶ್ಯ ಆಸ್ಟ್ರೇಲಿಯಾದಲ್ಲಿ ಸಾಮಾನ್ಯವಾಗಿತ್ತು.

ಬ್ರಿಟನ್‌ನಲ್ಲಿ ರಾಷ್ಟ್ರೀಯ ಆರೋಗ್ಯ ಸೇವೆಗೆ ಸಾಕಷ್ಟು ತೊಡಕು ಎದುರಾಗಿತ್ತು. ರೋಗಿಗಳಿಗೆ ಸೇವೆ ಒದಗಿಸಲು ಕಂಪ್ಯೂಟರ್ ಮೂಲಕ ಅಗತ್ಯ ಮಾಹಿತಿ ಪಡೆಯಲು ಸಾಧ್ಯವಾಗಲಿಲ್ಲ. ಕೆಲ ಆಸ್ಪತ್ರೆಗಳು ತುರ್ತು ಶಸ್ತ್ರ ಚಿಕಿತ್ಸೆ ಹೊರತುಪಡಿಸಿದರೆ ಉಳಿದೆಲ್ಲ ಶಸ್ತ್ರ ಚಿಕಿತ್ಸೆಗಳನ್ನು ಮುಂದೂಡಿದ್ದವು.

## ವಿಮಾನಗಳ ಕಾರ್ಯನಿರ್ವಹಣೆ ಮೇಲೆ ಪರಿಣಾಮ

ಮುಂಬೈ, ಜು. 19 - ಜಾಗತಿಕವಾಗಿ ಮೈಕ್ರೋಸಾಫ್ಟ್ ಸೇವೆಯಲ್ಲಿ ವ್ಯತ್ಯಯ ಆಗಿರುವ ಕಾರಣದಿಂದಾಗಿ ವಿಮಾನಗಳ ಕಾರ್ಯನಿರ್ವಹಣೆ ಮೇಲೆ ಪರಿಣಾಮವಾಗಿದೆ. ಹಲವು ವಿಮಾನಗಳ ಹಾರಾಟ ರದ್ದುಗೊಳಿಸಲಾಗಿತ್ತು ಹಾಗೂ ವಿಮಾನ ನಿಲ್ದಾಣಗಳ ಪರಿಶೀಲನಾ ವಿಭಾಗದಲ್ಲಿ ಉದ್ದನೆಯ ಸರದಿ ಉಂಟಾಗಿತ್ತು.

ಬುಕಿಂಗ್, ಚೆಕ್ ಇನ್ ಹಾಗೂ ಬೋರ್ಡಿಂಗ್ ಪಾಸ್ ಸೇರಿದಂತೆ ಹಲವು ಸೇವೆಗಳು ಕಂಪ್ಯೂಟರ್ ಮೂಲಕ ಸಾಧ್ಯವಾಗಲಿಲ್ಲ. ಕೈ ಬರಹದ ಮೂಲಕ ಸೇವೆ ಒದಗಿಸಿದ್ದರಿಂದ ಕೆಲಸಗಳು ಮಂದಗತಿಯಲ್ಲಿ ಸಾಗಿದ್ದವು.

ಭಾರತದ ಬಹುತೇಕ ವಿಮಾನ ನಿಲ್ದಾಣಗಳಲ್ಲಿ ಮೈಕ್ರೋಸಾಫ್ಟ್ ವ್ಯತ್ಯಯವಾಗಿತ್ತು. ಮೊದಲ ಬಾರಿಗೆ ನನಗೆ ಕೈ ಬರಹದ ಚೀಟಿ ಸಿಕ್ಕಿತು ಎಂದು ಇಂಡಿಗೋ ವಿಮಾನಗಳ ಪ್ರಯಾಣಿಕ ಅಕ್ಷಯ್ ಕೊಠಾರಿ ಹೇಳಿದ್ದಾರೆ.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಗುರು ಪೂರ್ಣಿಮೆ



ದಾವಣಗೆರೆ, ಜೂ. 19- ದೇವ ರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಗುರು ಪೂರ್ಣಿಮೆ ಪ್ರಯುಕ್ತ ನಾಡಿದ್ದು 21ರ ಭಾನುವಾರ ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನ ಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ಉಷಾ ಮತ್ತು ಮುದೇಗೌಡ್ರು, ಗಿರೀಶ್ ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ಪ್ಯಾಲೆಸ್ತೇನ್ ಅತಿಕ್ರಮಣ ಕಾನೂನು ಬಾಹಿರ

### ಇಸ್ರೇಲ್ ವಿರುದ್ಧ ವಿಶ್ವಸಂಸ್ಥೆ ನ್ಯಾಯಾಲಯದ ತೀರ್ಪು

ಹೇಗ್, ಜು. 19 – ಪ್ಯಾಲೆಸ್ತೇನ್ ಅನ್ನು ಇಸ್ರೇಲ್ ಅತಿಕ್ರಮಿಸಿಕೊಂಡಿರುವುದು ಕಾನೂನು ಬಾಹಿರ ಎಂದು ವಿಶ್ವ ಸಂಸ್ಥೆಯ ಉನ್ನತ ನ್ಯಾಯಾಲಯ ತಿಳಿಸಿದೆ.

ಈ ಅತಿಕ್ರಮಣವನ್ನು ತಕ್ಷಣವೇ ತೆರವುಗೊಳಿಸಬೇಕು ಎಂದು ಅಂತರರಾಷ್ಟ್ರೀಯ ನ್ಯಾಯಾಲಯ ತಿಳಿಸಿದೆ. ಇದು ಇಸ್ರೇಲ್ ವಿರುದ್ಧ ನೀಡಲಾದ ಅಭೂತಪೂರ್ವ ತೀರ್ಪಾಗಿದೆ. 15 ನ್ಯಾಯಮೂರ್ತಿಗಳ ಅಂತರ ರಾಷ್ಟ್ರೀಯ ನ್ಯಾಯಾಲಯ ಈ ತೀರ್ಪು ನೀಡಿದೆ.

ತೀರ್ಪನ್ನು ಖಂಡಿಸಿರುವ ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು, ಈ ಜಾಗವು ಯಹೂದಿಗಳ ಐತಿಹಾಸಿಕ ಮಾತೃಭೂಮಿಯಾಗಿದೆ ಎಂದಿದ್ದಾರೆ. ಈ ತೀರ್ಪು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವ ಬೀರಲಿದ್ದು, ಪ್ಯಾಲೆಸ್ತೇನ್‌ಗೆ ಮಾನ್ಯತೆ ನೀಡಬೇಕೆಂಬ ಬೇಡಿಕೆಗೆ ಬಲ ಸಿಗಲಿದೆ.

ಪಶ್ಚಿಮ ದಂಡೆ ಹಾಗೂ ಪೂರ್ವ ಜೆರುಸಲೇಂನಲ್ಲಿ ಇಸ್ರೇಲ್ ನೆಲೆಗಳ ವಿಸ್ತರಣೆ ಹಾಗೂ ಕಟ್ಟಡಗಳೂ ಸೇರಿದಂತೆ ಹಲವಾರು ಅಂಶಗಳನ್ನು ಪರಿಗಣಿಸಿ ಅಂತರರಾಷ್ಟ್ರೀಯ ನ್ಯಾಯಾಲಯ ತೀರ್ಪು ನೀಡಿದೆ.

ಇಸ್ರೇಲ್ ಹಾಗೂ ಹಮಾಸ್ ನಡುವೆ ತೀವ್ರ ಸಂಘರ್ಷ ನಡೆಯುತ್ತಿರುವ ಮಧ್ಯೆ ಹೇಗ್‌ನಲ್ಲಿರುವ ಅಂತರರಾಷ್ಟ್ರೀಯ ನ್ಯಾಯಾಲಯ ತೀರ್ಪು ನೀಡಿದೆ. ಇಸ್ರೇಲ್ ಈ ನ್ಯಾಯಾಲಯಕ್ಕೆ ತನ್ನ ಕಾನೂನು ತಂಡವನ್ನು ಕಳಿಸಿರಲಿಲ್ಲ. ವಿಶ್ವಸಂಸ್ಥೆ ಹಾಗೂ ಅಂತರರಾಷ್ಟ್ರೀಯ ನ್ಯಾಯಾಧೀಕರಣಗಳು ಪಕ್ಷಪಾತಿ ಹಾಗೂ ಅನ್ಯಾಯದ್ದು ಎಂದು ಇಸ್ರೇಲ್ ಹೇಳುತ್ತಾ ಬಂದಿದೆ.

ಹೇಗ್ ನ್ಯಾಯಾಲಯದ ಹುಸಿ ನಿರ್ಧಾರದಿಂದ ಐತಿಹಾಸಿಕ ಸತ್ಯ ಬದಲಾಗದು. ಇಸ್ರೇಲ್ ತನ್ನ ಮಾತೃಭೂಮಿಯಲ್ಲಿದೆ ಎಂದು ನೇತನ್ಯಾಹು ಹೇಳಿದ್ದಾರೆ.

ಈ ತೀರ್ಪು ಪ್ಯಾಲೆಸ್ತೇನ್‌ಗೆ, ನ್ಯಾಯ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಮಹತ್ವದ ಕ್ಷಣ ಎಂದು ಪ್ಯಾಲೆಸ್ತೇನ್ ಅಧ್ಯಕ್ಷರ ಸಲಹೆಗಾರ ಮಹಮೌದ್ ಅಬ್ಬಾಸ್ ಹೇಳಿದ್ದಾರೆ.

1967ರಲ್ಲಿ ಮಧ್ಯಪ್ರಾಚ್ಯ ಸಮರದ ವೇಳೆ ಪಶ್ಚಿಮ ಬ್ಯಾಂಕ್, ಪೂರ್ವ ಜೆರುಸಲೇಂ ಹಾಗೂ ಗಾಜಾ ಪಟ್ಟಿಗಳನ್ನು ಇಸ್ರೇಲ್ ವಶಪಡಿಸಿಕೊಂಡಿತ್ತು. ಈ ಪ್ರದೇಶಗಳನ್ನು ಸ್ವತಂತ್ರ ದೇಶವಾಗಿ ಪರಿಗಣಿಸಬೇಕು ಎಂದು ಪ್ಯಾಲೆಸ್ತೇನ್ ವಾದಿಸಿತ್ತು. ಪಶ್ಚಿಮ ದಂಡೆ ವಿವಾದಿತ ಪ್ರದೇಶ ಎಂದು ಇಸ್ರೇಲ್ ಹೇಳುತ್ತಿದೆ. ಪೂರ್ವ ಜೆರುಸಲೇಂ ಅನ್ನು ವಶಕ್ಕೆ ತೆಗೆದುಕೊಂಡಿದೆ. 2005ರಲ್ಲಿ ಗಾಜಾದಿಂದ ಹಿಂದೆ ಸರಿದಿತ್ತು. ಆದರೆ, ನಿರ್ಬಂಧ ಮುಂದುವರೆಸಿದೆ.

## ನಗರ - ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆರ್.ಎಂ.ಸಿ. ಲಿಂಕ್ ರಸ್ತೆ, ಬಿ.ಟಿ. ಲೇಔಟ್, ಗುಜರಿ ಲೈನ್, ಬಂಬೂ ಬಜಾರ್, ಮಟ್ಟಿಕಲ್, ಬಿಡಿಓ ಕಚೇರಿ, ಇಮಾಮ್ ನಗರ, ಅಮರಪ್ಪನ ತೋಟ, ಆನೆಕೊಂಡ, ಎಲ್.ಬಿ.ಎಸ್. ನಗರ ಟಿ.ಸಿ. ಲೇಔಟ್, ಬಿಟಿ ಲೇಔಟ್, ಕೆ.ಆರ್. ರಸ್ತೆ, ಇಮಾಮ್ ನಗರ, ಆನೆಕೊಂಡ, ಐನಳ್ಳಿ ಕಾಂಪೌಂಡ್, ಎಪಿಎಂಸಿ, ಭಾರತ್ ಕಾಲೋನಿ, ಶೇಖರಪ್ಪ ನಗರ ಹೆಚ್.ಕೆ.ಆರ್. ನಗರ, ಕಬ್ಬೂರು ಬಸಪ್ಪ ನಗರ, ಅಣ್ಣಾ ನಗರ, ಬಸಾಪುರ ರಸ್ತೆ, ಗೋಶಾಲೆ, ಪಿ.ಬಿ. ರಸ್ತೆ, ರವಿ ಮಿಲ್ ಹಾಗೂ ಆವರಗೆರೆ, ಹೊನ್ನೂರು, ಐಗೂರು, ಮಲ್ಲಶೆಟ್ಟಿಹಳ್ಳಿ, ತೋಳಹುಣಸೆ, ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.




ಅಭಿನಂದನೆಗಳು

ದಾವಣಗೆರೆ ತಾಲ್ಲೂಕು, ಅಗಸನಕಟ್ಟೆ ಗ್ರಾಮದ ನಿವಾಸಿ
ಶ್ರೀಮತಿ ಹಳ್ಳೇರ ಸಾವಿತ್ರಮ್ಮ ಮತ್ತು ಶ್ರೀ ಬಸವರಾಜಪ್ಪ ಹೆಚ್. ಬಿ. ರವರ ಮಗನಾದ
ಡಾ. ಮರುಳಸಿದ್ದೇಶಿ ಎಚ್. ಬಿ.
ಅವರಿಗೆ ಅಭಿನಂದನೆಗಳು.

ಶ್ರೀಯುತರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ನ್ಯಾನೊಫ್ಲೂಯಿಡ್‌ಗಳೊಂದಿಗೆ ಟ್ಯೂಬ್ ಶಾಖ ವಿನಿಮಯಕಾರಕಗಳ ಶಾಖ ವರ್ಗಾವಣೆ ಗುಣಲಕ್ಷಣಗಳ ಪ್ರಾಯೋಗಿಕ ಮತ್ತು ಸಂಖ್ಯಾತ್ಮಕ ತನಿಖೆಗಳು' ಮಹಾ ಪ್ರಬಂಧಕ್ಕೆ ಜುಲೈ 18ರಂದು, ಬೆಳಗಾವಿಯಲ್ಲಿ ನಡೆದ ಘಟಿಕೋತ್ಸವದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿರುತ್ತಾರೆ. ಇವರು ಮೈಸೂರು ವಿಟಿಯುನ ಪ್ರಾಧ್ಯಾಪಕ ಎಸ್.ಬಿ. ಪ್ರಕಾಶ್ ಮತ್ತು ಡಾ.ಎಸ್.ಎನ್. ಶ್ರೀಧರ ಉಪಕುಲಪತಿ, ಹಿಂದೂಸ್ತಾನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್, ಚೆನ್ನೈ ಇವರ ಮಾರ್ಗದರ್ಶನದಲ್ಲಿ ತಮ್ಮ ಪ್ರಬಂಧವನ್ನು ಸಲ್ಲಿಸಿದ್ದರು.

ಇವರಿಗೆ ಶುಭ ಕೋರುವವರು:
- ಶ್ರೀ ಜಿ.ಎಂ. ಲೋಕೇಶ್ ಮತ್ತು ಕುಟುಂಬ ವರ್ಗ, ವರ್ತಕರು, ಗಂಗನಕಟ್ಟೆ
- ಡಾ. ಎಂ. ಎಂ. ಪಟ್ಟಣಶೆಟ್ಟಿ ಮತ್ತು ಕುಟುಂಬ ವರ್ಗ, ದಾವಣಗೆರೆ
- ಶ್ರೀ ಬಸವರಾಜಪ್ಪ ಜಿ.ಬಿ.ಮತ್ತು ಕುಟುಂಬ ವರ್ಗ, ಚಿಕ್ಕತೊಗಲೇರಿ
- ಶ್ರೀಮತಿ ಶೋಭಾ ರವೀಂದ್ರನಾಥ್ ಜಿ.ಎಂ. ಕುಟುಂಬ ವರ್ಗ, ಗಂಗನಕಟ್ಟೆ
- ಶ್ರೀಮತಿ ಸುಮ ಮತ್ತು ಡಾ. ಸಿದ್ದೇಶ್ವರ ವಿ.ಪಾಟೀಲ್, ನಂದಿಕಂಬ, ದಾವಣಗೆರೆ

ಹಳ್ಳೇರ ಕುಟುಂಬ ವರ್ಗ, ಪ್ರವೀಣ್ ಕಂಠಿ ಮತ್ತು ಗುರುಪ್ರಸಾದ್ ಯು.


## ಸಿಎ ಅಂತಿಮ ಪರೀಕ್ಷೆ ನಗರದ ನಂದನ್ ಉತ್ತೀರ್ಣ



ದಾವಣಗೆರೆ, ಜು. 19 - ಭಾರತೀಯ ಲೆಕ್ಕಪರಿಶೋಧಕರ ಸಂಸ್ಥೆ ನಡೆಸುವ ದೇಶದ ಪ್ರಮುಖ ಪರೀಕ್ಷೆಗಳಲ್ಲೊಂದಾದ 'ಚಾರ್ಟರ್ಡ್ ಅಕೌಂಟೆಂಟ್' (C.A.) ಅಂತಿಮ ಪರೀಕ್ಷೆಯಲ್ಲಿ ನಗರದ ಎ.ಸಿ. ನಂದನ್ ಉತ್ತೀರ್ಣರಾಗಿದ್ದಾರೆ.


ಸ್ಥಳೀಯ ಸರ್ ಎಂ.ವಿ. ಕಾಲೇಜಿನಲ್ಲಿ ಪಿಯುಸಿ (ವಿಜ್ಞಾನ) ಪೂರೈಸಿದ್ದ ನಂದನ್, ಹೈದರಾಬಾದ್‌ನ ತಪಸ್ಯಾ ಅಕಾಡೆಮಿಯಲ್ಲಿ ಸಿಎ ಫೌಂಡೇಶನ್ (ಸಿಪಿಟಿ) ಮತ್ತು ಸಿಎ ಇಂಟರ್ ತರಬೇತಿ ಪಡೆದು ಬೆಂಗಳೂರಿನಲ್ಲಿ ಸಿಎ ಅಂತಿಮ ಪರೀಕ್ಷೆಯನ್ನು ಬರೆದಿದ್ದರು.

ಪ್ರಸ್ತುತ ಬೆಂಗಳೂರಿನ ಬಿ.ಕೆ. ರಾಮಧ್ಯಾನಿ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿರುವ ನಂದನ್, ರಾಜ್ಯದ ಮಹಾನಗರಗಳಲ್ಲದೇ ಹೈದರಾಬಾದ್, ತಮಿಳುನಾಡು, ಮುಂಬೈ, ದೆಹಲಿ, ಉತ್ತರ ಪ್ರದೇಶಗಳಲ್ಲಿ ಆಡಿಟ್ ಕೆಲಸ ನಿರ್ವಹಿಸಿದ್ದಾರೆ.

ಗಾಯಕರೂ ಆಗಿರುವ ಅವರು, ಸಂಗೀತ ಸಂಯೋಜಕ ಮತ್ತು ಸಾಹಿತ್ಯ ಬರಹಗಾರರೂ ಹೌದು. ನಂದನ್, ನಿಟುವಳ್ಳಿಯ ಪಿ.ಎಂ. ಶ್ರೀ ಆರ್.ಎಂ.ಎಸ್.ಎ. ಸರ್ಕಾರಿ ಪ್ರೌಢಶಾಲೆಯ ಹಿರಿಯ ಶಿಕ್ಷಕರೂ, ಗಾಯಕರೂ ಆಗಿರುವ ಸಿ.ಅಜಯ್ ನಾರಾಯಣ್ ಮತ್ತು ಸೀತಮ್ಮ ಪ್ರೌಢಶಾಲೆಯ ಸಂಗೀತ ಶಿಕ್ಷಕಿ ಶ್ರೀಮತಿ ತ್ರಿವೇಣಿ ದಂಪತಿ ಪುತ್ರ. ನಂದನ್ ಸಹೋದರಿ ಶ್ರೀಮತಿ ಮೇಘ ಕೌಶಿಕ್ ಆರ್ಕಿಟೆಕ್ಟ್ ಆಗಿದ್ದಾರೆ.

## ಡೆಹರಾಡೂನ್ ಮಿಲಿಟರಿ ಕಾಲೇಜು ಪ್ರವೇಶ ಪರೀಕ್ಷೆ

ದಾವಣಗೆರೆ, ಜು.19- ಡೆಹರಾಡೂನ್ ನಲ್ಲಿರುವ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್‌ನಲ್ಲಿ 8 ನೇ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾನ್ಯತೆ ಪಡೆದ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿರುವವರು ಸೆಪ್ಟೆಂಬರ್ 30 ರೊಳಗಾಗಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಫೀಲ್ಡ್ ಮಾರ್ಷಲ್ ಕೆ.ಎಂ ಕಾರ್ಯಪ್ಪ ರಸ್ತೆ, ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ದೂ. 080-25589459 ಹಾಗೂ ಜಾಲತಾಣ: www.rimc.gov.in ಸಂಪರ್ಕಿಸಬಹುದು.


Vasavi Mahila & Yuvathiyara Sangha
Tapasya Vasavi Nrutyalaya (R), Davanagere
is now Affiliated to
Bharahtiya Gandarva Mahavidhyalaya Mandali, DH-108
Exams will be conducted in our Institution till Praveshika Poorna for this year for the following categories
- Bharathanatyam
- Kathak
- Mohana Veena
- Tabala
- Keyboard
- Harmonium
- Guitar

ಪರೀಕ್ಷಾ ಕೇಂದ್ರ, ಈಗ ದಾವಣಗೆರೆಯಲ್ಲಿ
Examination Centre now in Davanagere
Session: November-December, 2024
Last Date for Enrollment August 15th
Exam Centre Address
#583/4 2nd floor, N.R.Road, Davangere - 01
Exam Centre Number 1240
Exam Centre incharge
Sri Lakshmi Ajith, Ph. 9886671448





॥ ಶ್ರೀ ಕಲ್ಲೇಶ್ವರ ಪ್ರಸನ್ನ ॥
ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ನಗರ ತರಳಬಾಳು ಬಡಾವಣೆ ವಾಸಿ
ದಿ॥ ಶ್ರೀ ಜಿ. ಓಂಕಾರಪ್ಪ ಇವರ ಮಕ್ಕಳಾದ
ಶ್ರೀ ಹರೀಶ್ ಜಿ.ಓ. ಮತ್ತು ಶ್ರೀ ಗಿರೀಶ್ ಜಿ.
ಇವರುಗಳು ಮಾಡುವ ವಿಜ್ಞಾಪನೆಗಳು.
ದಿ. 12-7-2024ನೇ ಶುಕ್ರವಾರ ಬೆಳಗಿನ ಜಾವ 4 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ
ಶ್ರೀಮತಿ ಕಮಲಮ್ಮ ಓಂಕಾರಪ್ಪ
(ಬಾಡ ಗ್ರಾಮದ ಶ್ರೀ ದಿ॥ ಜಿ. ಓಂಕಾರಪ್ಪ ನಿ. ಇಂಜಿನಿಯರ್ ಇವರ ಧರ್ಮಪತ್ನಿ)
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 20-07-2024ನೇ ಶನಿವಾರ ಬೆಳಿಗ್ಗೆ 10-30 ಗಂಟೆಗೆ
ತರಳಬಾಳು ಸಭಾ ಭವನ (ಎಸ್.ಎಸ್. ಮಿನಿಹಾಲ್), ಹದಡಿ ರಸ್ತೆ, ದಾವಣಗೆರೆಯಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು : ● ಶ್ರೀಮತಿ ಆಶಾ ಶ್ರೀ ಬಸವರಾಜ ಪಟೇಲ್ ● ಶ್ರೀಮತಿ ಅನಿತಾ ಶ್ರೀ ಹನುಮಂತಗೌಡ ದೊಡ್ಡಗೌಡರ್ ● ಶ್ರೀಮತಿ ಅನುಪಮ ಶ್ರೀ ಜಿ.ಓ. ಹರೀಶ್ ● ಶ್ರೀಮತಿ ಮಂಜುಳ ಶ್ರೀ ಜಿ. ಗಿರೀಶ್ ● ಶ್ರೀಮತಿ ಅಪೂರ್ವ ಶ್ರೀ ಚೇತನ್, ● ಶ್ರೀಮತಿ ಅನನ್ಯ ಶ್ರೀ ವಿಕಾಸ್ ● ಅನೂಪ್ ● ಗೌರಿ ಮತ್ತು ಕೋಮಲ
ಗಂಗಪ್ಪರ ವಂಶಸ್ಥರು, ದೊಡ್ಡಬಸಪ್ಪರ ವಂಶಸ್ಥರು ಮತ್ತು ಬಾಡಾ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಿ ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.



ಸಂಪೂರ್ಣ ರಿಲ್ಯಾಕ್ಸ್ ಮಸಾಲಾ ಪಾನಿ

ಈ ಪಾನಿ ಅದ್ಭುತ ಮತ್ತು ಆರೋಗ್ಯಕರ
ಮೊಟ್ಟಮೊದಲ ಭಾರತೀಯ ರೈತನ ಹೊಸ ಆವಿಷ್ಕಾರ

ಪದಾರ್ಥಗಳು
ಅಶ್ವಗಂಧ, ಬ್ರಾಹ್ಮೀ, ಶತಾವರಿ, ಬೆಟ್ಟದನೆಲ್ಲಿಕಾಯಿ, ಅತಿಬಲ, ಜೇನುತುಪ್ಪ, ತ್ರಿಫಲ, ತುಳಸಿ, ಶುಂಠಿ, ಬೆಳ್ಳುಳ್ಳಿ, ಕೊತ್ತಂಬರಿಸೊಪ್ಪು, ಪುದೀನ, ನಿಂಬು, ಕಾಳುಮೆಣಸು, ಅಜ್ವಾನ, ಸೋಂಪು, ಚಕ್ಕೆ, ಲವಂಗ, ಏಲಕ್ಕಿ, ಕರಿಉಪ್ಪು, ಸೈಂದವ ಲವಣ ಮುಂತಾದ ಪದಾರ್ಥಗಳು

ಉಪಯೋಗಗಳು
ಗ್ಯಾಸ್ಟ್ರಿಕ್, ಕಫ, ಶೀತ, ಕೆಮ್ಮು, ನೆಗಡಿ, ಗೊರಕೆ, ಜ್ಞಾಪಕಶಕ್ತಿ, ಜೀರ್ಣಕ್ರಿಯೆ, ಮಲಬದ್ಧತೆ ನಿವಾರಣೆ, ಹಸಿವು ಹೆಚ್ಚಿಸುವುದು, ಜ್ವರದಿಂದ ಹರಡುವ ರೋಗಗಳನ್ನು ತಡೆಗಟ್ಟುವುದು, ಧೂಮಪಾನ, ತಂಬಾಕು ಹಾಗು ಗುಟ್ಕಾದಿಂದ ಉಂಟಾಗುವ ರೋಗಗಳನ್ನು ತಡೆದು ಶ್ವಾಸಕೋಶ ಶುದ್ಧವಾಗುತ್ತದೆ.

ಬಳಸುವ ವಿಧಾನ
ಪ್ರತಿದಿನ ಮುಂಜಾನೆ ಖಾಲಿ ಹೊಟ್ಟೆಗೆ 150ಎಮ್.ಎಲ್ ರಿಂದ 200ಎಮ್.ಎಲ್ (ಒಂದೂವರೆ ಟೀ ಲೋಟ) ಉಪಯೋಗಿಸಬೇಕು. ಕೇವಲ 20 ರಿಂದ 30 ಸೆಕೆಂಡುಗಳಲ್ಲಿ ಗ್ಯಾಸ್ಟಿಕ್ ಕಡಿಮೆಯಾಗಿ ಮಲಬದ್ದತೆ ನಿವಾರಣೆಯಾಗಿ ಹಸಿವು ಹೆಚ್ಚಿಸುವುದು. ರಾತ್ರಿ ಊಟವಾದ ನಂತರ ಮಲಗುವ ಮುನ್ನ 150 ಎಮ್.ಎಲ್ ರಿಂದ 200ಎಮ್.ಎಲ್ ಪಾನಿ ಕುಡಿಯುವುದು. ಕುಡಿದ ನಂತರ ಮೇಲೆ ನೀರು ಕುಡಿಯಬಾರದು. ನಿದ್ರಾವಸ್ಥೆಯಲ್ಲಿ ಗೊರಕೆ ನಿಯಂತ್ರಣಕ್ಕೆ ಬರುತ್ತದೆ ಮತ್ತು ಕಫ, ಶೀತ, ಕೆಮ್ಮು, ನೆಗಡಿ ಕಡಿಮೆಯಾಗಿ ಒಳ್ಳೆಯ ನಿದ್ದೆ ಬರುವುದು ಹಾಗು ಜೀರ್ಣಕ್ರಿಯೆ ಉತ್ತಮವಾಗುವುದು.
ಒಂದು ವರ್ಷ ಮೇಲ್ಪಟ್ಟ ಮಕ್ಕಳಿಗೆ ಪ್ರತಿದಿನ 50ಎಮ್.ಎಲ್ (ಅರ್ಧ ಟೀ ಲೋಟ) ನಷ್ಟು 2 ತಿಂಗಳ ಕಾಲ ಪಾನಿ ಉಪಯೋಗಿಸುವುದರಿಂದ ಜ್ಞಾಪಕಶಕ್ತಿ ಹೆಚ್ಚಿಸುವುದು

ಈ ಪಾನೀಯವನ್ನು ಮಜ್ಜಿಗೆಯೊಂದಿಗೆ ಮಿಶ್ರಣ ಮಾಡಿದರೆ ಮಸಾಲಾ ಮಜ್ಜಿಗೆಯಾಗುತ್ತದೆ.
ಈ ಪಾನೀಯವನ್ನು ಒಗ್ಗರಣೆ ಹಾಕಿದರೆ ಊಟಕ್ಕೆ ರಸಂ ಆಗುವುದು.
ಈ ಪಾನಿಯು ಆಹಾರ ಮತ್ತು ಔಷಧವಾಗಿದೆ
ಸಂಪರ್ಕಿಸಿ. : 77601 04892



“ಶ್ರಾವಣ ಸಂಭ್ರಮ”
ಆಕರ್ಷಕ ರಿಯಾಯಿತಿ ಮಾರಾಟ
14-07-2024 ಪ್ರಾರಂಭ
10 + 10% ಎಲ್ಲಾ ಪ್ರಾಡಕ್ಟ್‌ಗಳ ಮೇಲೆ
30 ರಿಂದ 50% ಆಯ್ದ ಪ್ರಾಡಕ್ಟ್‌ಗಳ ಮೇಲೆ
*T&C Apply
ಮದುವೆ ಮಹೋತ್ಸವಗಳಿಗಾಗಿ
ಶಾಂತಲಾ
silk sarees | bridalwear | chudies | kidswear | Menswear
ಚಾಮರಾಜಪೇಟೆ & ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas